


ಸಂಪುಟ ೫ | ಏಪ್ರೆಲ್ ೧೯೪೬ | ಸಂಚಿಕೆ ೧

ಶೋಭಾನೆ

ಕೊರವಂಜಿಯು ಈ ಯುಗಾದಿ ತನ್ನ ಐದನೆಯ ಹುಟ್ಟುಹಬ್ಬವನ್ನು ಆಚರಿಸ ಬೇಕಾಗಿತ್ತು. ಆದರೆ ದೇಶಾದ್ಯಂತವೂ ತಲೆದೋರಿರುವ ಕ್ಷಾಮ ಕಾಲದಲ್ಲಿ, ಜನರು ಉಣಲಿಲ್ಲದೆ, ಉಡಲಿಲ್ಲದೆ ತೊಳಲಿ ಭಯಂಕರಸ್ಥಿತಿಯಲ್ಲಿರುವಾಗ, ಸಹಾನುಭೂತಿ ಯುಳ್ಳ ಯಾರೂ ತುಂಬಾ ಮೆರೆಯಬಾರದು ಎಂದಂದುಕೊಂಡು, ತುಂಬು ಒಡಲಿ ನಿಂದ ರಂಗುರಂಗಿನ ಸಿಂಗರದುಡಿಗೆಯಿಂದ ಬಾರದೆ, ತನ್ನ ಸಾಮಾನ್ಯ ನಿಜ ರೂಪಿ ನಲ್ಲಿಯೇ ಬಂದಿದ್ದಾಳೆ. ಓದುಗರಿಗೆ, ಹಲವರಿಗೆ, ನಿರಾಶೆಯಾಗಿರಬಹುದು. ಕೊರ ವಂಜಿಯು ಅವರಿಗೆ ಒಂದು ಭರವಸೆಯನ್ನು ಕೊಡುತ್ತಾಳೆ. ಇಷ್ಟರಲ್ಲೇ ಭಾರತವು ಸ್ವತಂತ್ರವಾಗುವ ಸೂಚನೆಗಳು ಕಾಣಬರುತ್ತಿವೆ. ಆ ಕಾಲದಲ್ಲಿ ದೇಶದೊಡನೆ ತಾನೂ ತುಂಬು ಸಿಂಗರಿಸಿಕೊಂಡು ಜನರ ಕಣ್ಮನಗಳನ್ನು ಸೆಳೆದು ಅವರ ಸೇವೆ ಯನ್ನು ನಗುತ ನಗಿಸುತ ಮಾಡೇ ಮಾಡುವಳು.

ಪಾರ್ಥಿವ ಸಂವತ್ಸರದಲ್ಲಿ ನಮಗೆ ನೆರವಾದ ಲೇಖಕರಿಗೆ ಜಾಹೀರಾತುಗಾರ ರಿಗೆ, ಅಚ್ಚೊತ್ತಿದವರಿಗೆ, ಹೆಚ್ಚಾಗಿ ಮಾರಾಟಗಾರರಿಗೆ ಧನ್ಯವಾದಗಳನ್ನು ಅರ್ಪಿಸಿ, ವ್ಯಯನಾಮ ಸಂವತ್ಸರದಲ್ಲಿ ಓದುಗರೆಲ್ಲರಿಗೂ — (ಅಂದರೆ ಎಲ್ಲರೂ ಈ ಗುಂಪಿನಲ್ಲಿ ಸೇರಿದ್ದಾರಲ್ಲ –) ಜಗನ್ನಿಯಾಮಕನು ಸಕಲ ಸುಖ ಸಂಪತ್ತುಗಳನ್ನೂ ಸೌಕರ್ಯ ವಿರಾಮಗಳನ್ನೂ ಅನುಗ್ರಹಿಸಲೆಂದು ಮನಸಾರೆ ಪ್ರಾರ್ಥಿಸುತ್ತೇವೆ.

— o — —

ಕುಹಕಿಡಿಗಳು

ಚರ್ಚಿಲ್ಲರು ಅಮೆರಿಕಾ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡಿದಾಗ – ಬಿಳಿ ಇರುವೆಗಳ ಜೀವನ ರಹಸ್ಯವನ್ನು ತಿಳಿಯಿರಿ ಎಂದರಂತೆ – ಗೆಜ್ಜಲು ಹುಳು ಎನ್ನಲಿಲ್ಲ.

—ಕ್ರಿಮಿ ಕೀಟಗಳಲ್ಲೂ ಈ ಬಿಳಿ, ಕರಿ, ಕೆಂಪು ಭಾವನೆಯೇ ? ವರ್ಣ ದ್ವೇಷವೇ ?

* * *

ಬಡ ಶ್ರಮಜೀವಿಯೊಬ್ಬನೆಂದನಂತೆ—ಈ ಕ್ಷಾಮದಿಂದ ಒಂದು ಪ್ರಯೋಜನ- ಈ ಭಾಷಣಕಾರರ ಕೊಬ್ಬೇನಾದರೂ ಕಡಿಮೆಯಾಗಬಹುದೋ ಏನೋ—ಎಂದು

* * *

ದೊಂಬಿ ಗಲಭೆಗಳಾದಾಗ ಪೋಲೀಸರು ಗುಂಡುಹಾರಿಸುವುದು ವಾಡಿಕೆ — ಆದರೆ, ಪೋಲೀಸಿನವರ ಗಲಭೆ ಆದಾಗ ಸಾರ್ವಜನಿಕರು ಗುಂಡು ಹಾರಿಸಬೇಕಾದ್ದು —ನ್ಯಾಯ, ಇದನ್ನು ಬಿಟ್ಟು ಬ್ರಿಟಿಷ್ ಸೈನಿಕರನ್ನು ಕರೆಸಿದ್ದು ನ್ಯಾಯವೇ ?

—ಎಂದು ನಮಗೆ ಪತ್ರ ಒಂದು ಬಂದಿದೆ.

* * *

ಪ್ಯಾಲಿಸ್ಟೈನಿನ ಯೇಹೂದಿಗಳೆಲ್ಲರೂ ನಮ್ಮೂರಿಗೆ ಬಂದು ಶ್ರೀ. ಜಿನ್ನಾರವ ರನ್ನು ಭೇಟಿ ಮಾಡಿ, ಯೇಹೂಡಿಸ್ಥಾನದ ಹೋರಾಟಕ್ಕೆ ಸಲಹೆಗಳನ್ನು ಪಡೆಯುವ ರೆಂಬುದು ಶುದ್ಧ ಸುಳ್ಳಂತೆ—

* * *

" ಆಹಾರದಲ್ಲಿ ವಿಟಮಿನುಗಳು ಇರಲೇಬೇಕು "—ಪತ್ರಿಕೆ-

—ಆಹಾರಕ್ಕೆ ಮಿನು ಸಿಕ್ಕರೇ ಸಾಕು, ಎನ್ನುವ ಸ್ಥಿತಿಯಲ್ಲಿ ಈ ವಿಟ ಮಿನು ಗಳೂ ಬೇಕೇ ?

* * *

ಭಾರತಕ್ಕೆ ಸ್ವಾತಂತ್ರವನ್ನು ಸಾಧಿಸಲೇ ಬೇಕು ಎಂದು ಧೃಡಮನಸ್ಸಿನಿಂದ ಮಂತ್ರಿ ನಿಯೋಗವು ಬಂದಿದೆಯಂತೆ—

—ಜಿನ್ನಾ ಅವರಿಗೆ ಗೊತ್ತಿರಬೇಕು ಇದು– ಅದಕ್ಕೇ ಹೀಗೆಲ್ಲಾ ವ್ಯಕ್ತಿದೂಷಣೆ —ಮದ್ದಳೆಯುವನನ್ನು ದೂಷಿಸಿದ ಹಾಗೆ.

—-o—

ಉರಿಗಾಳು

———o———

ಸುಪ್ರಸಿದ್ಧ ಕುಸ್ತಿ ಪೈಲ್ವಾನರೊಬ್ಬರು ಬರೆದ ಕವನವೊಂದು ಕನ್ನಡ ವಿಶೇಷ ಸಂಚಿಕೆಯೊಂದರಲ್ಲಿ ಇಷ್ಟರಲ್ಲೇ ಹೊರಬೀಳುವುದಂತೆ....ಅವರೇ ಅದನ್ನು ಸ್ವತಃ ಸಂಪಾದಕರ ಕಚೇರಿಗೆ ತೆಗೆದುಕೊಂಡು ಹೋಗಿರಬೇಕು.

*　*　*

ಹೊಲ್ಕಾರ್ ಟೀಮಿನವರಿಗೂ ಮೈಸೂರು ಟೀಮಿನವರಿಗೂ ಪಂದ್ಯ ನಡೆದಾಗ, ಮೈಸೂರಿನ ಹಲವು ಪ್ರಖ್ಯಾತ ಆಟಗಾರರು ಭಾಗವಹಿಸಿದ್ದರೆ, ಇನ್ನೂ ಉತ್ತಮವಾಗಿ ರುತ್ತಿತ್ತೆಂಬ ವದಂತಿ ಹಬ್ಬಿದೆ....ಯಾರ ಆಟ?

*　*　*

ಬೆಂಗಳೂರಲ್ಲಿ ಸುಮಾರು ೩ ಲಕ್ಷ ಜನರು ಕಳೆದ ವರ್ಷ ಮಿಲಿಟರಿ ಲಾರಿಗ ಳಿಂದ ತಪ್ಪಿಸಿ ಬದುಕಿಕೊಂಡರು ಎಂದು ಹೇಳಲಾಗಿದೆ ...ಅವರಲ್ಲನೇಕರು ಹಿಂದಿನ ಸಾಲಿನಲ್ಲೂ ತಪ್ಪಿಸಿಕೊಂಡಿದ್ದರೆಂದು ಈಗ ಗೊತ್ತಾಗಿದೆ.

*　*　*

ಸಿಟಿಬಸ್ :—"ಸಿನಿಮಾ ಜಾಹಿರಾತುಗಳನ್ನು ಊರ ಬೀದಿಗಳಲ್ಲಿ ಮೆರವಣಿಗೆ ಮಾಡಿಸುವ ಒಂದು ಗಾಡಿ" ಕಂಡಕ್ಟರ ಅಪ್ಪಣೆ ಪಡೆದು ಕೆಲವು ನಾಗರಿಕರೂ ಅದ ರೊಳಗೆ ಕೂಡುತ್ತಾರೆ.

*　*　*

ಹೀಗೆ ಹೇಳುವುದು ನ್ಯಾಯವೆ? ಸರ್ಕಾರಿ ಅಧಿಕಾರಿಗಳೂ ಕೂಡ ಸರಿಯಾದ ಉತ್ತರಗಳನ್ನಿತ್ತರು (ಪತ್ರಿಕೆ) ಅನುಭವಸ್ಥರಾದ ಅಧಿಕಾರಿಗಳು ದೊರೆತರೆ ಒಂದು ದೇಶ ಹೇಗೆ ಮುಂದು ಬಂದೀತೆಂಬುದಕ್ಕೆ ಮೈಸೂರು ಒಳ್ಳೆಯ ನಿದರ್ಶನ (ಭಾಷಣದ ವ.ದಿ).

*　*　*

ಕೋಳಿಗಳನ್ನು ಸಂಸ್ಥಾನದ ಯಾವ ಪ್ರದೇಶದಿಂದಲೂ ಹೊರಕ್ಕೆ ಸಾಗಿಸ ಬಾರದು (ಸರ್ಕಾರಿ ಆಜ್ಞೆ)........ಕೋಳಿ ಕೂಗುವ ಮೊದಲೇ ಸಾಗಿಸಿದರೆ, ಪತ್ತೆ ಆಗುವ ಪ್ರಮೇಯ ಕಡಮೆ.

*　*　*

"ಮದುವೆ ಮುಂತಾದ ಕಾರ್ಯ್ಗಗಳನ್ನು ಈ ಸಾರಿ ನಿಲ್ಲಿಸಬೇಕು'' (ಕ್ಷಾಮ ನಿವಾರಣಾ ಸಲಹೆ)....ಇದರಿಂದ ಈಗಲೇ ಅಷ್ಟು ಅನುಕೂಲ ಆಗುವುದಿಲ್ಲ.

* * *

"ಪೋಲೀಸ್ ಕಾನ್‌ಸ್ಟೇಬಲ್‌ಗಳ ಮುಷ್ಕರ" (ಸುದ್ದಿ)....ಯಾರಾದರೂ 'ರೈಟ್ ಎಬೌಠಿ....ರೇನ್ !' ಎಂದು ಕೂಗಿದ್ದರೆ, ಅವರು ಸ್ಟೇಷನಿಗೆ ಹಿಂತಿರುಗುತ್ತಿದ್ದರು.

* * *

"ಅಂದವಾದ ಅನೇಕ ಮಾದರಿಯ ಸ್ತ್ರೀಯರ ಗಡಿಯಾರಗಳು ನಮ್ಮಲ್ಲಿ ದೊರೆಯುತ್ತವೆ'' (ಜಾಹಿರಾತು) ಆ ಸ್ತ್ರೀಯರ ಫೋಟೋಗಳನ್ನು ನಮಗೆ ಕಳುಹಿಸಿದರೆ, ಗಡಿಯಾರಗಳನ್ನು ಆರಿಸುವುದಕ್ಕೆ ಸಹಾಯವಾದೀತು.

* * *

"ಲಂಡನಿಗೂ ಪ್ಯಾರಿಸಿಗೂ ಶೀಘ್ರದಲ್ಲಿಯೇ ಆಕಾಶ ಬಸ್ಸುಗಳನ್ನು ಏರ್ಪಡಿಸುವರು'' (ಸುದ್ದಿ) ... ...ಬಸ್ ನಿಂತು ಹೋದರೆ, ತಳ್ಳುವವರು ಯಾರು ?

* * *

"ಈ ವರ್ಷ ಇಂಗ್ಲೆಂಡಿನವರು ೪ ಕೋಟಿ ೨೦ ಲಕ್ಷ ರೂಪಾಯನ್ನು ಪರಮಾಣುಭೇದಕ ಸಂಶೋಧನೆಗಾಗಿ ಖರ್ಚು ಮಾಡುವರು'' (ಅಟ್ಲೆ ಭಾಷಣ)... ಆದಕ್ಕೇ ಮತ್ತೆ, ಸಾಲ ಕೊಡಲು ಅಮೇರಿಕಾ ಹಿಂದುಮುಂದು ನೋಡುತ್ತಿರುವುದು.

* * *

ರಷ್ಯಾವಿಗೂ ಟರ್ಕಿಗೂ ಇಷ್ಟರಲ್ಲೇ ಶಾಂತಿ ಪ್ರಾರಂಭವಾಗುವ ಸೂಚನೆಗಳಿವೆಯಂತೆ.

* * *

ಬಾಲಿಕ ಬಾಲಕ ಪಾಠಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ಬಹಳ ದಿವಸದಿಂದಲೂ ನಡೆಯುತ್ತಿರುವ ಬಗ್ಗೆ... (ಪತ್ರಿಕೆ) ಕೈಲಾಸ ದಾರಿಯಲ್ಲಿ ಹೀಗೆ ವಿಗ್ರಹಿಸುವುದು ಸಹಜ.

* * *

ಪ್ರಗತಿಪುರುಷ

ಅಂಕೆ ಶಂಕೆಯಿಲ್ಲದೆರಡು
ಮಂಕು ಕವನ ಕತೆಯ ಬರೆದು
ಬಿಂಕದಿಂದ ನಡೆವ ನಾ
ನೆಲ್ಲರಂತಲ್ಲವೋ ಡೊಂಕುಬಾಲ!

ದೊಡ್ಡದಾರಿ ಗೊಡ್ಡು ಎಂದು
ಹೆಡ್ಡತನದಿ ರೀತಿಗೆಟ್ಟು
ಅಡ್ಡದಾರಿ ನಡೆವನಾ
ನೆಲ್ಲರಂತಲ್ಲವೋ ಯಂಗ್ರಭಟ್ಟ!

ನೀಲಕಂಠ, ರಾಮ, ಕೃಷ್ಣ,
ಎಲ್ಲ ಹಳೆಯ ಕಗ್ಗ, ಹಳಸು,
ಎಲ್ಲೆಮೀರಿ ನಡೆವ ನುಡಿವ,
ಶೀಲ ಪ್ರಗತಿ ಎಂಬ ನಾ
ನೆಲ್ಲರಂ ತಲ್ಲವೋ ಮಕರಪುಚ್ಛ!

ಹೆಣ್ಣು ಗಂಡು ಎರಡೆ ಜಾತಿ;
ಅಮ್ಮ, ಅಕ್ಕ, ಮಗಳು, ಮಡದಿ
ಹೆಣ್ಣು ಎಂದರೆಲ್ಲ ಒಂದೆ;
ಸಂಪ್ರದಾಯ ಬದ್ಧನಲ್ಲ
ಪ್ರಗತಿ ಮಾರ್ಗ ಹಿಡಿದನಾ
ನೆಲ್ಲರಂ ತಲ್ಲವೋ ಮರ್ಕಟೇಶ!

ಬಲ್ಲ ಹಿರಿಯರೆಲ್ಲ ಹೊಲ್ಲ
ಎಲ್ಲಬಲ್ಲ ನಾನೆ ಮಲ್ಲ,
ಎಲ್ಲರಂತಲ್ಲದೊಂದು
ಶೀಲಮಾರ್ಗ ಹಿಡಿದು ನಡೆವ
ಪ್ರಗತಿಪುರುಷನಾದ ನಾ
ನೆಲ್ಲರಂತಲ್ಲವೋ ಮಂಕುತಿಮ್ಮ !

ವಾನರೇಂದ್ರ, ವಕ್ರದಂತ,
ನಾಯಿಬಾಲ, ಯಬ್ಬಂಕ,
ಟೆಂಗ್ರಿಬುಡ್ಡ, ಶಿಂಗಳೀಕ ;........ಆದರೇನು ?
ಸುಳಿಯ ಬೋಳಿಸಿದರೆ ಬರದೆ ?
ಹಿಡಿದ ದಾರಿ ಬಿಡದ ನಾ
ನೆಲ್ಲರಂ ತಲ್ಲವೋ ಬೇ.... ....ಫ.

ಪ್ರಾಜ್ಞಾನಾಂ ಪ್ರಗತಿರ್ನಾಸ್ತಿ !!

—ಬುಳ್ಳ.

ದಂತ ಪಂಕ್ತಿಯು ನಡುವೆ ಎಂತಿಪ್ಪುದು ಜಿಹ್ವೆ
ಅಂತು ಪೋಲೀಸರ ಬಳಸಿನಲಿ— ಲಂಚಿಗನು
ಕುಂತು ನುಂಗುವ ನೋಡ— ಸರ್ವಜ್ಞ

*   *   *

ಬೆಟ್ಟದಲಿ ಮಟ್ಟದಲಿ ನೆಟ್ಟನಿಳಿಜಾರಿನಲಿ
ಇದ್ದಿಲಾ ಬಸ್ಸ ನೂಕುವೆವು— ಕಾಸ್‌ಕೊಟ್ಟು
ಗುದ್ದುಕೊಂಡಂತೆ— ಸರ್ವಜ್ಞ

*   *   *

ಸಾನಿಟರಿ ಇನ್‌ಸ್ಪೆಕ್ಟರ ಸಂಸಾರ

ಸಾನಿಟರಿ ಇನ್‌ಸ್ಪೆಕ್ಟರದು ಶುದ್ಧವಾದ ಮನಸ್ಸು; ನಿಷ್ಕಲ್ಮಷವಾದ ಹೃದಯ. ತಿಂಬ ಕಾಸಿಗೆ ಮೀರಿ ದುಡಿಯುವ ಪ್ರಾಣಿ. ಬೆಳಗ್ಗೆ ಐದೂವರೆ ಗಂಟೆಗೆ ಬೈಸಿಕಲ್ ಹತ್ತಿ, ಊರ ಸಂದುಗೊಂದೆಲ್ಲ ತಿರುಗಿ, ಕಸದ ತೊಟ್ಟಿಗಳೊಳಗೆಲ್ಲ ಇಣಿಕಿ ನೋಡಿ, ನಾಲ್ಕಾರು ಫಲಹಾರ ಮಂದಿರಗಳನ್ನು ಹಾದು, ಬೆವರುತ್ತಾ ಬುಸುಗುಟ್ಟುತ್ತಾ ಹನ್ನೆರಡೂವರೆಗೆ ಮನೆಗೆ ಹಿಂತಿರುಗುವನು. ಪಾತಮ್ಮ, ಪಾಪ, ಪತಿವ್ರತಾಶಿರೋಮಣಿ; ಮೇಸ್ತ್ರಿಗಳು ಮಾರ್ಕೆಟ್‌ನಿಂದ ಹೊಡೆದು ತಂದ ಕಾಯಿಪಲ್ಯಗಳನ್ನೆಲ್ಲ ಪಚನಮಾಡಿ ರುಚಿರುಚಿಯಾಗಿ ಬಡಿಸಿದರೂ ಹಳಸುಹಿಟ್ಟಿನ ದೋಸೆಗಳಿಂದ ಕೆಟ್ಟಿದ್ದ ಅವನ ಹೊಟ್ಟೆಗೆ ಯಾವುದೂ ಚಂದಗಾಣುತ್ತಿರಲಿಲ್ಲ. ಆದರೂ, ಅವನು ಬಿಮ್ಮನೆ ಕೂತು ಊಟದ ಶಾಸ್ತ್ರ ಮುಗಿಸಿ ಮಲಗಿ ನಿದ್ದೆ ತೆಗೆದು ಮತ್ತೆ ಎರಡೂವರೆ ಗಂಟೆಗೆ ಸೈಕಲ್ ಹತ್ತಿ ಗಲ್ಲಿ ತಿರುಗಿ ಪೂರ್ಣಯ್ಯನ ಛತ್ರದ ಬೀದಿ ನಾರಾಯಣಾಚಾರ್ ಹೋಟಲಲ್ಲಿ ಕೇಸರಿಭಾತ್, ಬೋಂಡ ಮೆದ್ದು ಐದುಗಂಟೆಗೆ ಮತ್ತೆ ಮನೆಗೆ ಬಂದು ಇಣಿಕಿ ನೋಡಿಕೊಂಡು ವ್ಯಾಕ್ಸಿನೇಟರ್ ರಾಮಪ್ಪನವರ ಮನೆಯಲ್ಲಿ ಜಮಖಾನೆ ಹಾಸಿ ಇಸ್ಪೀಟಿಗೆ ಕೂತರೆ ರಾತ್ರಿ ಕೂಳಿಗೆ ಬರುವುದು ಒಂಬತ್ತಕ್ಕೋ, ಹತ್ತಕ್ಕೋ!

ಎಲ್ಲೋ ಒಂದೊಂದು ಸಲ ನೌಕರಿಯ ಗಡಿಬಿಡಿಯ ನಡುವೆ, ಅವನು ಪಾತಮ್ಮನ ಮಾತಿಗೆ ಕಿವಿಕೊಟ್ಟದ್ದೂ ಉಂಟು. ಎದುರುಮನೆ ಸುಬ್ಬಮ್ಮನಿಗೆ ಷಷ್ಟಿಪೂರ್ತಿ ಶಾಂತಿ ಆದದ್ದು, ಆಚೆಮನೆ ರಾಚಪ್ಪ ಹೆಂಡತಿಯನ್ನು ಹೊಡೆದದ್ದು, ಪಕ್ಕದ ಮನೆ ಸೊಸೆ ಅವುಳಿ ಜವುಳಿ ಹಡೆದದ್ದು, ತನ್ನ ತಮ್ಮನಿಗೆ ಮೂರನೆಯ ಸಲಕ್ಕೆ ಬಿ. ಎ. ಪಾಸಾದದ್ದು—ಎಲ್ಲವನ್ನೂ ಅವಳಿಂದ ತಿಳಿದುಕೊಂಡ ಹಾಗೆ ಅವನಿಗೆ ಜ್ಞಾಪಕ. ಆದರೂ, ಅವನು ಅವಳ ಅರ್ಧಾಂಗನಾಗಿ ಸಂಸಾರ ನಡೆಸುತ್ತಿರಲಿಲ್ಲ. ಪಾತಮ್ಮನ ಅಂತರಂಗವನ್ನು ಅವನು ಅರಿತಿರಲಿಲ್ಲ. ಆಕೆಯ ಕೊರಗು ಆಕೆಗೇ ಗೊತ್ತು. ಎಷ್ಟೋ ದಿನ ಅವಳು ಒಬ್ಬಳೇ ಕೂತು ಗಂಡ ಬರುವ ತನಕ ಅತ್ತು ಅತ್ತು ಗೋಳಾಡಿದ್ದುಂಟು. ಸಂಬಳ, ಸಂಬಳಕ್ಕಿಂತ ಹೆಚ್ಚಿನ ಸಾರಿಗೆ ಇವುಗಳಿಂದ ಅವನ ಆರ್ಥಿಕ ಸ್ಥಿತಿ ತೃಪ್ತಿಕರವಾಗಿದ್ದರೂ, ಅವನಿಗೆ ದಾಂಪತ್ಯ ಸುಖ ಸುತರಾಂ ಇರಲಿಲ್ಲ. ಊರಿನವರ ಆರೋಗ್ಯಪರಿಪಾಲನೆಯ ಪರಿದಾಟದಲ್ಲಿ ಕೈಹಿಡಿದ ಹೆಣ್ಣನ್ನು ಅವನು ದುಃಖದಲ್ಲಿ ಅದ್ದಿದ್ದ. ಮುಖ್ಯ ತಪ್ಪು ಅವನದೇ.

ಒಂದು ದಿನ ಎರಡು ಗಂಟೆಗೆ, ಇನ್‌ಸ್ಪೆಕ್ಟರು, ಸೈಕಲ್ ಹತ್ತುವುದಕ್ಕಾಗಿ ಮೂರನೆಯ ಸಾರಿ ನೆಲ ತುಳಿದಾಗ, ಬಾಗಿಲಲ್ಲೇ ಕಂಬನಿ ತುಂಬಿಕೊಂಡು ನಿಂತಿದ್ದ ಪಾತಮ್ಮ ಮೆಲುದನಿಯಲ್ಲಿ, "ಇವತ್ತು ಸಂಜೆ ಪಾರ್ಕಿಗೆ ಹೋಗೋಣವೇ, ಇಬ್ಬರೂ? ನಾನು ಈ ಹೊಸಲು ದಾಟ ನಾಲ್ಕು ವರ್ಷವಾಯಿತು, ನೆನಪಿದೆಯೇ?'' ಎಂದಳು.

ಇನ್ಸ್ಪೆಕ್ಟರು ಚಕಿತನಾದ. ಅವನ ಮನಸ್ಸು ಥಟಕ್ಕನೆ ಕರಗಿತು. ಅಲ್ಲೇ ನಿಂತಿದ್ದ ಮುನಿಸಿಪಲ್ 'ಮನೆ ಜವಾನ' ಬೆರಗಾದ.

ಹೌದು. ಹಳ್ಳಿ ರೈತರೂ ಕೂಡ ಹೆಂಡತಿ ಸಂಗಡಲೇ ಜಾತ್ರೆ ಸಂತೆಗಳಿಗೆ ಹೋಗುತ್ತಾರೆ. ಸಾಹೇಬರುಗಳೆಲ್ಲ ಸಮೇತವಾಗಿಯೇ ಪಾರ್ಕಿಗೆ ಹೋಗುತ್ತಾರೆ. ದೊಡ್ಡ ದೊಡ್ಡ ಅಧಿಕಾರೀ ದಂಪತಿಗಳು ಪಾರ್ಕುಗಳಲ್ಲಿ ಭುಜಕ್ಕೆ ಭುಜಕೊಟ್ಟು ಕತ್ತಲಾದ ಮೇಲೂ ಕಿಲಕಿಲ ನಗುತ್ತಾರೆ.... "ಆಗಲಿ, ಅದಕ್ಕೇನು?" ಎಂದ. ಅರ್ಧ ನಿಮಿಷ ತಡೆದು, "ಆಗಲಿ ಪಾತು!" ಎಂದು ನಾಲ್ಕು ವರ್ಷದ ಹಿಂದೆ ತಾನು ಅವಳನ್ನು ಪ್ರೀತಿಯಿಂದ ಕರೆಯುತ್ತಿದ್ದ ಹಾಗೆ ಕರೆದು ಹೇಳಿದ. "ಐದು ಗಂಟೆಗೆ ಬರುತ್ತೇನೆ, ಸಿದ್ಧವಾಗಿರು!" ಎಂದ ......ಮನೆ ಕಡೆ ಹೊರಟಾಗ, ನಾರಾಯಣಾಚಾರ್ ಹೋಟೆಲಿಂದ ಎರಡು ತುಂಡು ಮೈಸೂರುಪಾಕನ್ನೂ ಒಂದು ಪೊಟ್ಟಣ ಖಾರದಿಯನ್ನೂ ಪಾರ್ಸಲ್ ಕಟ್ಟಿಸಿ ತಂದ.

ಸರಿಯಾಗಿ ೫ ಗಂಟೆಗೆ ದಂಪತಿಗಳು ಬೀದಿಗಿಳಿದರು. ಚಾಕಲೇಟ್ ಬಣ್ಣದ ಬಂಗಾಳ ರೇಷ್ಮೆ ಸೀರೆ, ಅದೇ ಬಣ್ಣದ ಬಟನ್ ಸ್ಲೀವ್ ಬ್ಲೌಸು ತೊಟ್ಟು ಮಖಮಲ್ ಚಪ್ಪಲಿ ಹಾಕಿಕೊಂಡು, ಉದ್ದವಾದ ಜಡೆಯ ತುದಿಗೆ ಕೆಂಪು ರಿಬ್ಬನ್ ಕನಕಾಂಬರದ ಹೂವಿನ ಕುಚ್ಚು, ಎಡಗೈಯಲ್ಲಿ ೬ ಗಾಜಿನ ಬಳೆ, ಬಲಗೈಯಲ್ಲಿ ಎರಡೇ ಎರಡು ಚಿನ್ನದ ಬ್ರಿಡ್ಜ್ ಬಳೆ........ ...ಕಾಲೇಜು ಬಿ. ಎಸ್‌ಸಿ. ಕ್ಲಾಸಿನ ತರುಣೀಮಣಿಯ ಹಾಗಿದ್ದಳು, ಪಾತಮ್ಮ ಆ ದಿನ, ಸಾನಿಟರಿ ಇನ್ಸ್ಪೆಕ್ಟರ ಕಣ್ಣಿಗೆ! ಅದುವರೆಗೂ ಅವಳನ್ನು ಚೆನ್ನಾಗಿ ಕಣ್ಣು ತುಂಬ ನೋಡದೆ ಇದ್ದದ್ದೇ ಮಹಾಪರಾಧ ಎಂದು ಅನ್ನಿಸಿತು ಅವನಿಗೆ. ಕೊಂಚ ನಾಚಿಕೆಯೂ ಆಯಿತು.

ಪಕ್ಕದ ಚೌಕದಲ್ಲೇ ಒಂದು ಜಟಕ ಗೊತ್ತುಮಾಡಿ ಪಾರ್ಕಿಗೆ ಭಾಡಿಗೆ ಕೇಳಿದ. "ಅಲ್ಲೇ ಒಂದು ಹೋಟೆಲಿದೆ; ಹೊಸಾಹೊಸದು. ನುಗ್ಗೋಣ, ಪಾತು" ಅಂದ, ಬಿಟ್ಟ ಕಣ್ಣು ಬಿಟ್ಟ ಹಾಗೆಯೇ. ಅವನ ಪ್ರೀತಿಯ ಸಡಗರ ಕೇಳಿ ಪಾತಮ್ಮನಿಗೆ ರೋಮಾಂಚವಾಯಿತು. 'ತುಟಿಯಲೇನೋ ಬಂದು, ಕಣ್ಣಲೇನೋ ನಿಂತು, ಕೆನ್ನೆ ಕೆಂಪಾದುದಾಗ'.

ಹೋಟೆಲಲ್ಲಿ, ಮಾಣಿಯ ಅಷ್ಟೋತ್ತರದಿಂದ ಅವಳು, "ಜಾಂಗೀರು, ಶಂಕರ ಪಾಳ್ಯ" ಎಂಬ ಎರಡನ್ನು ಆರಿಸಿದಾಗ, ಇನ್ಸ್ಪೆಕ್ಟರು ಆನಂದ ಪರವಶನಾದ. ಪಾತಮ್ಮನ ನಾಲಗೆಯ ನಾಗರಿಕತೆಯನ್ನು ನಾಜೋಕನ್ನೂ ಅವನು ಆಗ ಅರಿತ. ಅವಳು ಬೆಂಗಳೂರಿನವಳು, ಗಾಂಧಿನಗರದಲ್ಲಿ ಬೆಳೆದವಳು. ಶ್ರೀಮಂತ ಲಾಯರ ಮಗಳು, ಗಂಡನ ತಂದೆ ತಾಯಿಂದಿರ ಬಲವಂತದಿಂದ ಎಸ್ಸೆಸ್ಸೆಲ್‌ಸಿಯಿಂದ ಹಿಂತಿರುಗಿದ ವಿದ್ಯಾವತಿ–ಎಂಬುದನ್ನೆಲ್ಲ ಆಗ ಅವನು ನೆನೆಸಿಕೊಂಡನು. ಛೆ! ಇಂಥ ಅಪ್‌ಟುಡೇಟ್ ಹುಡುಗಿಯನ್ನ ದನದ ಹಾಗೆ ಕೊಟ್ಟಿಗೆಯಲ್ಲಿ ಕಟ್ಟಿದ್ದೆನಲ್ಲಾ ಅಂತ ಅವನು ತನ್ನನ್ನು

ತಾನೇ ಮರೆಯಲ್ಲಿ ಚಿವುಟಿಕೊಂಡ. ಕಾಫಿ ಬಟ್ಟೆಲ ಅಂಚಿನ ಗೆರೆಯಿಂದ ಅವನು ಅವಳ ತಿದ್ದಿದ ಹುಬ್ಬನ್ನೂ ಹೊಳೆವ ಕಣ್ಣುಗಳನ್ನೂ ಎಳೆನೇಸರಿನಂತೆ ಕಂಗೊಳಿಸುವ ಕುಂಕುಮದ ಬೊಟ್ಟನ್ನೂ ಈಕ್ಷಿಸಿದ. ನವಚೈತನ್ಯಲಹರಿಯಿಂದ ಅವನು ಪುಳಕ ಗೊಂಡ.

ಪಾರ್ಕಿನ ಕಾಲುದಾರಿಯ ಮೇಲೆ ಅವಳು ದೇವಕನ್ಯೆಯಂತೆ ತೇಲಿಬಂದಳು. ಗಂಡನ ನಿರ್ಮಲೀಕರಣ ನೈಪುಣ್ಯವನ್ನು ಅವಳು ಅಡಿಗಡಿಗೂ ಕೊಂಡಾಡಿದಳು. ಉದ್ಯಾನದಲ್ಲಿದ್ದ ಹೂವುಗಳ ಅಂದಚಂದಗಳನ್ನು ಜಾಣತನದಿಂದಲೂ ಕಲಾದೃಷ್ಟಿ ಯಿಂದಲೂ ವಿವರಿಸಿದಳು. ಸ್ಯಾನಿಟರಿ ಇನ್‌ಸ್ಪೆಕ್ಟರ ಕಣ್ಣಿಗೆ ಕಂಡದ್ದು ಗಿಡದ ಬುಡದ ಗೊಬ್ಬರ; ಅವಳನ್ನು ಆಕರ್ಷಿಸಿದ್ದು ತುತ್ತತುದಿಯ ರಂಗಿನ ನಕ್ಷತ್ರ.

ಅಲ್ಲೇ, ದೂರದ ಮರದ ಮೇಲಿಂದ ಕೂಜನ ಮಾಡುತ್ತಿದ್ದ ಕೋಗಿಲೆಯನ್ನು ಅವಳು ಅಣಕಿಸಿದಾಗ ಅವನು ಹುಚ್ಚನಾದ. ಹುಲ್ಲಿನ ಮೇಲೆ ಕೂತು ಅವಳ ಕೈಯನ್ನು ತನ್ನ ಕೈಯಲ್ಲಿರಿಸಿಕೊಂಡು ಬಹಳ ಹೊತ್ತು ಅದರ ಕೋಮಲತೆಯ ಅವ ಲೋಕನದಲ್ಲೇ ಮಗ್ನನಾಗಿದ್ದ.

ಹಿಂದಕ್ಕೆ ಬರುವಾಗ, ಇಬ್ಬರೂ ನಡೆದುಕೊಂಡೇ ಬಂದರು. ದಾರಿಯಲ್ಲಿ ಅವನು ಹೂವಿನಂಗಡಿಗೆ ನುಗ್ಗಿ ಸೊಗಸಾದ ಮಲ್ಲಿಗೆ ಕುಚ್ಚು ನಾಲ್ಕು ತೆಗೆದುಕೊಂಡ. ಮನೆ ಬಾಗಿಲಲ್ಲಿ ಮುನಿಸಿಪಲ್ ಜವಾನ ಎಂದೂ ಕಾಣದ್ದನ್ನು ಕಂಡು ಹಲ್ಲು ಕಿರಿದ. ಸಾಹೇಬರ ಕುಟುಂಬ ಜೀವನದಲ್ಲಿ ಅನುರಾಗದ ಮುಂಬೆಳಕನ್ನು ಅವನು ಸ್ವಾಗತಿ ಸಿದ.

"ಇವತ್ತು ನಿಜವಾಗಿಯೂ ನಾನು ಸಂತೋಷವಾಗಿದ್ದೆ... ನಿಮಗೆ ತೋರದರೆ ಆಯಿತೋ, ಏನೋ? 'ವ್ಯಾಕ್ಸಿನೇಟರ್ ಮನೆ ಇಸ್ಪೀಟಿಗೆ ಹೊತ್ತಾಗಿಲ್ಲವೆ?" ಅಂ ದಳು.

"ಲೋ! ವ್ಯಾಕ್ಸಿನೇಟರ್ ಮನೆಗೆ ಹೋಗಿ ನಾನು ಬರುವುದಿಲ್ಲ....ಇನ್ನು ಮೇಲೆ....ಅಂತ ಹೇಳಿಬಿಟ್ಟು ನೀನು ಮನೆಗೆ ಹೋಗು!" ಎಂದು ಇನ್‌ಸ್ಪೆಕ್ಟರು ಅಪ್ಪಣೆ ಕೊಡಿಸಿ ಜವಾನನನ್ನು ದೂಡಿ, ಗೇಟ್‌ಬಾಗಿಲು ಹಾಕಿದರು.

—ರುದ್ರಮ್ಮ.

ಸಾಲವನು ಕೊಡುವಾಗ–ಇಂದ್ರರಿಂದ್ರರು ನೀವು!
ಸಾಲವನು ಹಿಂದಕೆ ಕೇಳ್ವಾಗ-'ಕೊಟ್ಟಷ್ಟು
ಕೊಟ್ಟಾಗ ತೆಗೆದುಕೊ'—ಸರ್ವಜ್ಞ.

ಅಂಗ ಚೇಷ್ಟೆ

ರಾಮಪ್ಪನಿಗೆ ಗಂಡುಮಗು ಆದದ್ದು ಕೇಳಿ ಅವನ ಕಿವಿ ಅರಳಿತು; ಅವನು ತಲೆ ಎತ್ತಿದ; ಹಲ್‌ಹಲ್ ಬಿಟ್ಟ: ತೊಡೆ ತಟ್ಟಿದ, ಹೊಟ್ಟೆ ತಾಳ ಹಾಕುತ್ತಿದ್ದನ್ನೂ ಮರೆತ. ಹುಡುಗನನ್ನು ತಲೆಯಮೇಲೆ ಕೂರಿಸಿ ಊರೆಲ್ಲ ಕಾಲಾಡಿಸಿದ; ಅವನ ಎದೆ ಉಬ್ಬಿತು, ಅವನಿಗೆ ಚತುರ್ಭುಜ ಬೆಳೆಯಿತು, ನಾಲಗೆಯಲ್ಲಿ ನೀರೂರಿತು; ಆದರೆ, ಬೆಳೆಯುತ್ತಲೂ ಮಗ ಅವನ ಎದೆಯಮೇಲೆ ಕೂತ; ಬರಬರುತ್ತಾ, ಮಗನ ತಲೆ ತಿರುಗಿತು; ಅವನು ತುಂಟನಾದ, ಬೆರಳು ತೋರಿಸಿದವರ ಹಸ್ತ ನುಂಗಿದ, ಕಂಡಕಂಡವರಿಗೆಲ್ಲ ನಾಮ ಬಳಿದ; ಟೋಪಿ ಹಾಕಿದ; ಮೂಗು ಮುರಿದ; ಕೈಕೊಟ್ಟ. ರಾಮಪ್ಪನ ಹತ್ತಿರ ಜನರು ಬಂದು ದೂರು ಹೇಳಿದಾಗ ಅವನ ಎದೆ ಡವಡವ ಎಂದಿತು; ಅವನ ಗಂಟಲು ಕಟ್ಟಿತು; ಅವನ ಎಡಗಣ್ಣು ಹಾರಿತು; ತೊಡೆ ನಡುಕ ಹತ್ತಿತು, ಅವರ ಗೋಳು ಕೇಳಿ ಅವನು ಕಣ್‌ಕಣ್ ಬಿಟ್ಟ, ಹಲ್ಲು ಕಿಸಿದ, ಹಣೆ ಬಡಿದ, ಅಷ್ಟೆ ಅಲ್ಲ ಮಗನ ನಡತೆಗೆ ತಲೆ ತಗ್ಗಿಸಿದ ಆದರೂ, ಅವನನ್ನು ತಡೆಯಲು ಕಿರುಬೆರಳನ್ನೂ ಎತ್ತಲಿಲ್ಲ, ಹೈದನೋ ಅಟ್ಟಕ್ಕೇರಿದ, ಮನೆಯಿಂದ ಹೊರಬಿದ್ದು ಕಾಲಿಗೆ ಬುದ್ಧಿ ಹೇಳಿದ, ಪರರ ಒಡವೆಗೆ ಬಾಯ್ ಬಿಟ್ಟ, ನಾಲಗೆ ಚಪ್ಪರಿಸಿದ, ಪರನಾರಿಯರೆದುರು ಹುಬ್ಬು ಹಾರಿಸಿದ, ನಾಲಗೆ ನೀಡಿದ, ಕಣ್ಣು ಮಿಟುಕಿಸಿದ, ತನಗಿಂತ ಹಿರಿಯರಾದವರ ಕಿವಿ ಹಿಂಡಿದ, ಅಧಿಕಾರಿಗಳ ಕಿವಿ ಕಚ್ಚಿದ, ನಡುಮುರಿದ; ಅವರ ಹತ್ತಿರ ಕಾಲುಕೆರೆದು ಜಗಳಕ್ಕೆ ಹೋದ, ಯಾರಾದರೂ ಹೆದರಿಸಿದರೆ, ಅವರೆದುರು ಸೊಂಟ ಬಗ್ಗಿಸಿದ, ಸಣ್ಣವರ ತಲೆಗಳನ್ನು ಕಲಾಯಿಮಾಡಿದ, ಎಲ್ಲರ ಕಣ್ಣನ್ನೂ ಕುಕ್ಕಿದ ಚಿಕ್ಕವನಾಗಿದ್ದಾಗಲೇ ರಾಮಪ್ಪ ಅವನಿಗೆ ಬರೆ ಹಾಕಬೇಕಾಗಿತ್ತು, ಬೆನ್ನು ಬಗ್ಗಿಸಬೇಕಾಗಿತ್ತು; ಆಗ ಹಾಗೆ ಮಾಡದೆ, ಈಗ ತಲೆ ಚಚ್ಚಿಕೊಂಡು ಎದೆ ಬಡಿದುಕೊಂಡ; ಹೊಟ್ಟೆ ಕಿವುಚಿಕೊಂಡ; ಮಗ ಮಾಡಿದ ಸಾಲಗಳನ್ನು ಹಲ್ಲು ಕಚ್ಚಿ ಹೊಟ್ಟೆಕಟ್ಟಿ ತಾನೇ ತೆತ್ತ. ಹಲವರ ಮುಂದೆ ಅಂಗಲಾಚಿದ; ಕೈಮುಗಿದ; ಮೊಣಕಾಲೂರಿದ; ಅಡ್ಡ ಬಿದ್ದ, ರಾಗ ಎಳೆದ; ಮಗ ಬಂದಾಗ ಮಾತ್ರ ಕೈಕಟ್ಟಿ ಬಾಯಿಮುಚ್ಚಿ ಬಾಲ ಮುದುರಿ ಮೂಲೆಯಲ್ಲಿ ಕೂತ. ಕೊನೆಗೆ, ನನ್ನ ಹೊಟ್ಟೆ ಉರಿಸುತ್ತೀಯಲ್ಲೋ ಎಂದು ಬಾಯಿ ಬಡಿಯುತ್ತಾ, ಮೊನ್ನೆ ಕಾಲು ಚಾಚಿದ; ತಲೆಮೇಲೆ ಕೈ ಇಟ್ಟುಕೊಂಡು, ಮೂಗಿನ ಮೇಲೆ ಬೆರಳಿರಿಸಿ ಉಸಿರು ಬಿಟ್ಟ; ಘಟ ಉರುಳಿಸಿದ. ಬದುಕಿದೆ, ಅಂತ ಸತ್ತ.

— ಶಾ ಠಾಳಿ.

ಸಿಂಹದ ಸೇಡು

—o—

"ನೀನಾರಿಗಾದೆಯೋ ಎಲೆಮಾನವಾ" ಎಂದು ಸವಾಲ್ ಹಾಕಿತು, ಇಟ್ಟರೆ ಸಗಣಿಯಾದ ಗೋವು. ಅಲ್ಲಾ! ಪಶುವೇ ಹೀಗೆಂದ ಬಳಿಕ ಪ್ರಾಣಿ ವರ್ಗದಲ್ಲಿ ಉಪಾಯಗಾರನಾದ ನರಿ ನರನನ್ನು ಏನೆನ್ನಬೇಕು? ಅಂಥ ನರಿಯೇ ಹುಲಿಯ ಹಿಂದ್ ಹಿಂದೆ ಅಲೆಯುತ್ತದೆ ಎಂಜಲಿಗಾಗಿ. ಹುಲಿಯೂ ಕಾಡಿಗೆ ರಾಜನಾಗಲಿಲ್ಲ. ಮೃಗರಾಜನೆಂದರೆ ಸಿಂಹವೇ, ಬೇರೆ ಮಾತೇ ಇಲ್ಲ. ಅಂದ ಮೇಲೆ ಸಿಂಹಕ್ಕೂ ಮಾನವನಿಗೂ ಅಂತರವೇನಾಯ್ತು. ನರನು ಸಿಂಹದ ರಾಜ್ಯದಲ್ಲಿ ಒಂದು ಜಂತು, ಹುಳು ಎಂದೆನ್ನಿಸಿಕೊಳ್ಳಲೂ ಲಾಯಃಕಿಲ್ಲ. ಇಂಥಾದ್ದರಲ್ಲಿ ಸ್ವಯಂ ಸಿಂಹವೇ ಯಃಕಶ್ಚಿತ್ ಮಾನವನ ಮೇಲೆ ಸೇಡು ತೀರಿಸಿಕೊಳ್ಳಲು ಹಠ ತೊಟ್ಟರೆ.... ...?

ನಮ್ಮೂರ್ನಲ್ಲೂ ನಾಟ್ಕದ್ಕಂಪ್ನಿಗಳು ಒಂದು ಪರದೆ ಮಾರಿಕೊಂಡು ವಾಪಸು ಹೋಗಿವೆ. ಸಿನೀಮಗಳೂ ಆಗಾಗ್ಗೆ ಬರುತ್ವೆ ಆದರೆ ಸರ್ಕಸ್ ಬಂದಿರಲಿಲ್ಲ. ಈಗ ಅದೂ ಬಂತು. ಗೊತ್ತೇ ಇದೆಯಲ್ಲ ಆಡು, ಕೋತಿ, ನಾಯಿ, ಕುದುರೆ, ಆನೆ, ಕತ್ತೆ ಇತ್ಯಾದಿ ಇತ್ಯಾದಿಗಳಲ್ಲದೆ ಒಂದು ಸಿಂಹ, ಮೇಲಾಗಿ ೩೬ ಜನ ಸ್ತ್ರೀ ನಟರು, ಪೈಲ್ವಾನರು ಕಮಂಗಿಗಳು—ಅಂತೂ ದೊಡ್ಡ ಕಂಪ್ನಿ ಅನ್ನಿ. ನಮ್ಮೂರ್ನಲ್ಲೂ ಎಲ್ಲರಿಗೂ ಸಿಂಹವನ್ನು ನೋಡಬೇಕೆಂಬ ಆಸೆಯಾಯ್ತು. ಆದರೆ ಅದರ ಬೋನನ್ನು ಮರೆಯಾಗಿಟ್ಟಿಟ್ಟಿದ್ದರು.

ಡೇರಾದೊಳಗೆ ಆಟ ಪ್ರಾರಂಭವಾಯ್ತು. ಜನ ಕಿಕ್ಕಿರಿದೂ ಮುಕ್ಕಿರಿದೂ ಕೂತಿದ್ದರು. ಕಮಂಗಿಗಳು ಮಂಗದಂತಾಡಿದುವು-ಮಂಗಗಳು ಅಂಗನೆಯರಂತಾಡಿದುವು, ಅಂಗನೆಯರ ಅಂಗಾಂಗ ಪ್ರದರ್ಶನವು ಸಾಂಗವಾಗಿ (ಪ್ರಾಸಪ್ರಾರಬ್ಧ) ನೆರವೇರಿದಾಗ ಸ್ತ್ರೀ ಪ್ರೇಕ್ಷಕರು ಕಣ್ಮುಚ್ಚಿ ಕುಳಿತಿದ್ದರೆಂದು ಅವರನ್ನೇ ನೋಡುತ್ತಿದ್ದವರೊಬ್ಬರು ಹೇಳಿದರು.

ಆದರೆ ಸಿಂಹದರ್ಶನಾಕಾಂಕ್ಷಿಗಳಾಗಿ ಹೋಗಿದ್ದ ನಮ್ಮೂರಿನ ರಸಿಕರಿಗೆ ಇವುಗಳೆಲ್ಲ ಸೊಗಸಿಯಾವೆ? "ಬಿಡು ಬಿಡು ಇದೇನು ಮಹಾ!" ಎಂದಿತು ಪ್ರೇಕ್ಷಕ ವೃಂದ. ಆಟ ಕೊನೆ ಕೊನೆಗೆ ಜಾರುತ್ತಾ ಸಿಂಹವು ಅಖಾಡಾಕ್ಕೆ ಇಳಿಯುವ ಸಮಯ ಸಮೀಪಿಸುತ್ತಿತ್ತು.

ಡೇರೆಯ ಮಧ್ಯದಲ್ಲಿ ಸಲಾಕಿಯ ಸುತ್ತು ಕೋಟೆಯನ್ನು ಕಟ್ಟಿದರು. ಅದರೊಳಗೆ ಬಿಗುವಾದ ಬಿಳಿ ಬ್ರೀಚಸ್, ನಾಲ್ಕಾರು ಸಾಲು ಗುಂಡಿಗಳಿದ್ದ ಕೆಂಪು ಮಕಮಕಲ್ ಕೋಟು, ಬಲಗೈಲಿ ಚಾವ್ಟಿ ಎಡಕೈಲಿ ಉದ್ದವಾದ ಬೆಳ್ಳಿ ಕೋಲು ಹಿಡಿದ

ಟ್ರೀನರನು "ಮೃತ್ಯುವಿನ ಪಂಜರಕೆ ನುಗ್ಗಿದನು ಮುಂದೆ". ನಾಲ್ಕೂ ಕಡೆಗಳಿಂದ ಸುತ್ತು ಕೋಟೆಯೊಳಕ್ಕೆ ಸರ್ಚ್ ಲೈಟುಗಳನ್ನು ಬಿಟ್ಟು ಉಳಿದ ದೀಪಗಳನ್ನು ಆರಿಸಿ ಬಿಟ್ಟರು. ಎಲ್ಲರಿಗೂ ಟ್ರೀನರನ್ನು ನೋಡಿ "ಅಯ್ಯೋ ಪಾಪ" ಅನ್ನಿಸಿತು. ಎಲ್ಲರ ಹೃದಯವೂ ಒಂದೇ ಏಟಿಗೆ ಬ್ಯಾಂಡಿನೇಟಿಗಿಂತಲೂ ಜೋರಾಯಿತು. ಏಕೆ? ಸಿಂಹದ ಬೋನನ್ನು ತಂದರು. ಅದರೊಳಗೆ ಸಿಂಹವು ಗುಟುರೆಹಾಕಿ ಓಡಾಡುತ್ತಿತ್ತು. ಎಲ್ಲರಿಗೂ ರೋಮನರ ರಾಜ್ಯದಲ್ಲಿ ಆಂಡ್ರೋಕ್ಲಿಸನು ಸಿಂಹದೊಡನೆ ಸೆಣಸುವುದನ್ನು ನೋಡುತ್ತಿದ್ದಂತೆ ಭಾಸವಾಗುತ್ತಿತ್ತು. ಬೋನಿನಿಂದ ಸಿಂಹವು ಹಾರಿ ಸುತ್ತು ಕೋಟೆಯೊಳಕ್ಕೆ ಧುಮುಕಿತು. ಎಲ್ಲರ ಹೃದಯವೂ ಮೇಲಕ್ಕೆದ್ದು ಎದೆಯ ಮಧ್ಯದಲ್ಲಿ ಸಿಕ್ಕಿಕೊಂಡಂತಾಯಿತು. ಸುಮ್ಮನಿದ್ದ ಮಕ್ಕಳು ಚಿಟ್ಟನೆ ಚೀರಿದುವು. ಸಿಂಹವು ತನ್ನದೇ ಆದ ಠೀವಿಯಿಂದ ಒಂದು ಕಾಲ್ಮಣೆಯ ಮೇಲೆ ಕುಳಿತುಕೊಂಡಿತು. ತನ್ನ ಕಾಡಾದರೇನು ಪರರ ಕಾಡಾದರೇನು? ಒಂದು ಸಾರಿ ಸುತ್ತಲೂ ಪಿಳಿಪಿಳಿ ನೋಡಿ ಬಾಯಿ ತೆರೆಯಿತು. ಘರ್ಜಿಸಲಿಲ್ಲ, ಆಕಳಿಸಿತು. ತನ್ನ ಬಾಲವನ್ನು ತನ್ನ ಹತ್ತಿರಕ್ಕೆಳೆದುಕೊಂಡು ತೂಕಡಿಸಲು ಪ್ರಾರಂಭಿಸಿತು. ಕಂಬ್ಬಿಗಲ್ಲ ಬೆಳ್ಳಿ ಕೋಲಿಗೂ ಮಿಸುಕಾಡಲಿಲ್ಲ. ಬೋನಿನೊಳಕ್ಕೆ ಹಾರಿತು. ಪುನಃ ಈಚೆಗೆ ಬರಲಿಲ್ಲ.

ನಮ್ಮೂರಿನಲ್ಲಿ ಅದೇ ಮೊದಲ ಮತ್ತು ಕೊನೆಯ ಪ್ರದರ್ಶನವಾಯಿತು. ಸಾಮಾನ್ಯವೇ ಈ ಸೇಡು?

—ಶ್ರೀ. ವೆಂ. ಶಾ.

[ಇದೇನಿದು! ಸಾಮ್ರಾಜ್ಯ ಶಾಹಿ ಸಿಂಹವೇ?]

ಬಚ್ಚಲಿಲ್ಲದ ಮನೆಯು ; ನಲ್ಲಿಬಾವಿಗಳಿಲ್ಲ
ರೊಚ್ಚಿಗಲ್ಲಿಯುದಾರಿ—ಆದರೇ?
ರೆಂಟುನಲವತ್ತೆಂಟು—ಸರ್ವಜ್ಞ

*   *   *

ಸಾಮುದಲಿ ಇರುವನಕ, ತಾಮಸವ ತೋರುವರು—
ಭಾರತದಿ ಕ್ಷಾಮತಲೆ ತೋರಿದೊಡೆ —ಗಡಗಡನೆ,
ಮಂತ್ರಿಯೋ ಬರುವ—ಸರ್ವಜ್ಞ

*   *   *

ನಂಬಿದಂತಿರಬೇಕು, ನಂಬದಲೆ ಇರಬೇಕು
ತಿಂಬರೆಂಬೆಚ್ಚರಿರಬೇಕು—ಬ್ರಿಟ್ಟನರ
ನಂಬದವ ಜಾಣ—ಸರ್ವಜ್ಞ

—⁂ ನಮ್ಮ ಯಾತ್ರಿಕರ ಪತ್ರ ⁂—

— ೦ —

(೧)

ಏಪ್ರಿಲ್ ಒಂದನೇ ತಾರೀಖಿಗೆ—ಅಂದರೆ April Fool's Day ಯುದ್ಧ ನಿಜವಾಗಿ ಮುಗಿಯಿತೆಂದು ಕಡಾಖಂಡಿತ ಹೇಳುತ್ತಾರಂತೆ. ಅಂತೂ ಆ ದಿನ, ಯಾರು ಏನು ಹೇಳಿದರೂ ನಾವು ಅನರ್ಥಮಾಡಿಕೊಳ್ಳಲಿಕ್ಕಿಲ್ಲ.

ಮೊನ್ನೆ ನಮ್ಮ ಸಂಪಾದಕರು, ಏನೂ ಸೂಚನೆಯೇ ಕೊಡದೆ ಇದ್ದಕ್ಕಿದ್ದ ಹಾಗೇ ನಮಗೆ ಹೇಳಿಕಳುಹಿಸಿದರು—ನನಗೆ, ರಾಜನಿಗೆ, ಚಂದೀಗೆ, ಸಂಪಾದಕರಿಗೆ ಗೊತ್ತು ನಾವೆಲ್ಲಿರುತ್ತೇವೆ ಅಂತ. ಇನ್ನೆಲ್ಲಿ ಮನೆಗಳಿಗೆ ಹೇಳಿ ಕಳುಹಿಸಿದರೆ ಯಾರೋ ಬಿಲ್ ಬಾಬ್ತು ಬಂದ ಅಂತ ಹೆದರಿಕೊಂಡು ಒಳಗಿಂದಲೇ ಒಬ್ಬೊಬ್ಬರೂ ಇಲ್ಲಾಂತ ಹೇಳಿ ಕಳಿಸ್ತೀವೋ ಅಂದುಕೊಂಡು, ನಾವು ಮನೆಯಲ್ಲಿ ಆಹಾರ ಉಳಿಸೋಕೋಸ್ಕರ ಉಡುಪಿ ಹೋಟಲಿಗೆ ನುಗ್ಗಿದ್ದ ಹೊತ್ತಿಗೇ-ಭಂಟನ್ನ ಕಳುಹಿಸಿದರು ಸಂಪಾದಕರು.

"ಏನೋ ತಕ್ಷಣ ಬಂದು ನೋಡಬೇಕಂತೆ ಸಾರ್" ಅಂದ.

"ಯಾರು, ಯಾರನ್ನ, ಯೇಕೆ, ಯಾವಾಗ, ಯಾರಿಂದ, ಯಾರಿಗೋಸ್ಕರ, ಯಾತರದೆಸೆಯಿಂದ" ಅಂದ ರಾಜ ನಮ್ಮ ರಾಜನ ಹಿರೇಮಗ ಪ್ರೈಮರಿ ಸ್ಕೂಲಿಗೆ ಹೋಗ್ತಾ ಇದ್ದಾನೆ. ಆ ಕುಲೋದ್ಧಾರಕನಿಗೆ ರಾಜ ವ್ಯಾಕರಣ ಹೇಳಿಕೊಡುತ್ತಾನಂತೆ. ಆ ಹುಡುಗನಿಗೆ ಏನಾದರೂ ಬಂತೋ ಇಲ್ಲವೋ-ಅಂತೂ ನಮಗೆಲ್ಲಾ ತಲೆ ನೋವು ವಿಪರೀತವಾಗಿ ಹೋಗಿದೆ.

"ಸಾರ್-ನೀವೆಲ್ಲಾ ಈಗಲೇ ನಮ್ಮ ಸಾಹೇಬ್ರಾಫೀಸಿಗೆ ಬರಬೇಕಂತೆ ಸಾರ್". ಅಂತ ನನ್ನ ಕಡೆ ತಿರುಗಿ ಹೇಳಿದ.

ಒಬ್ಬರ ಮುಖ ಒಬ್ಬರು ನೋಡಿಕೊಂಡು-ಆಗಲಿ ಅಂತ ಹೇಳಿಕಳುಹಿಸಿದೆವು.

ಸಂಪಾದಕರ ಮುಂದೆ ಅಪ್ಪನ ಜೇಬಿನಲ್ಲಿ ಸಿಗರೇಟ್ ಕದ್ದು ಸಿಕ್ಕಿಕೊಂಡವರ ಹಾಗೆ ಸರಿದೆವು.

"ಓಹೋ-ಏನು ಮಾಮೂಲು ಜಾಗದಲ್ಲೇ ಇದ್ದಿರಾ? ನನಗೆ ಗೊತ್ತು. ಅದಕ್ಕೇ ಅಲ್ಲಿಗೆ ಹೇಳಿಕಳುಹಿಸಿದೆ'' ಅಂದರು.

ನಾವೆಲ್ಲರೂ "ಹ್ಞೂ'' ಗುಟ್ಟಿದೆವು.

"ನಿಮಗೆಲ್ಲಾ ಒಂದು ಕೆಲಸ ನೇಮಿಸೋಣ ಅಂತ ಹೇಳಿ ಕಳುಹಿಸಿದೆ. ರಾಜಾ ರಾವ್, ನಿಮಗೇನಾದರೂ ಅನಾನುಕೂಲಗಳಿವೆಯೇನು ?" ಅಂತ ಕೇಳಿದರು.

"ಏನಿಲ್ಲ....ಹೂ....ಮನೇಲಿ....ಇವತ್ತು ಲೇಡಿ ಡಾಕ್ಟರ್‌ನ ಕರೆದುಕೊಂಡು ಹೋಗೋಣ ಅಂತ ಇದ್ದೆ" ಅಂತ ತಲೆ ಕೆರೀತ ಹೇಳಿದ.

"ನೀವು ಚಂದ್ರರಾವ್ ?"

" ಮಧ್ಯಾಹ್ನ . ನಮ್ಮತ್ತೆ ಚಿಕ್ಕಬಾಣಾವರದಿಂದ ಬರ್ತಾರಂತೆ. ಮನೇಲಿ ಸಮಯ " ಅಂತ ಹಲ್ಲು ಕಿರಿದ.

ನಾನು ಬೆಚ್ಚುಬಿದ್ದೆ. ನಾವು ಮೂವರೂ—ಘಾಟಿಗಳೇ ...

" ಇನ್ನು ನಿಮ್ಮ ಕಥೆಯೇನು ಕೇಫ ?" ಅಂತ ನನ್ನ ಕಡೆ ತಿರುಗಿದರು.

ನನಗೇನೂ ತೋಚಲಿಲ್ಲ.

" ಇನ್ನೂ ಒಂದೂವರೆ ತಿಂಗಳು ಪರವಾಗಿಲ್ಲ" ಅಂದೆ.

ಸಂಪಾದಕರು ಇದಕ್ಕೆಲ್ಲಾ ಕೈ ಆಡಿಸಿ—" ಇನ್ನೊಂದೂ ಮುಖ್ಯವಲ್ಲ. ಪ್ರಪಂಚದಲ್ಲಿ ಇದೇತಾನೇ ಒಂದು ದೊಡ್ಡ ಯುದ್ಧ ಮುಗಿದಿದೆ. ಇನ್ನು ಶಾಂತಿ ಸ್ಥಾಪನೆಗೆ ಕಚ್ಚಾಟವಾಗುತ್ತಿದೆ. ನಾವು ಸುಮ್ಮನೆ ಕೂರುವುದಕ್ಕಾಗುವುದಿಲ್ಲ, ವಿಶ್ವಶಾಂತಿಗೆ ನಾವೂ ಆದಷ್ಟು ಸಹಾಯ ಮಾಡಬೇಕು. ನೀವು ಮೂವರೂ ಬೆಂಗಳೂರು ಬಿಟ್ಟು ಊರೂರು, ಕೇರಿ ಕೇರಿ, ಹಳ್ಳಿ ಹಳ್ಳಿ—ಇವುಗಳ ಯಾತ್ರೆ ಹೊರಟು, ನೀವು ನೋಡಿದ್ದು, ಕೇಳಿದ್ದು ಎಲ್ಲವನ್ನೂ ನನಗೆ ಪತ್ರಗಳ ಮೂಲಕ ತಿಳಿಸಬೇಕು. ಮುಂದಿನ ಕೆಲಸ ನಾನು ನೋಡಿಕೊಳ್ಳುತ್ತೇನೆ. ಜಾಗ್ರತೆ ತಯಾರಾಗಿ " ಅಂದರು. ತಯಾರಾದೆವು.

ಇನ್ನುಮೇಲೆ ಆಗಿಂದಾಗ್ಯೆ ಕಂಡಿದ್ದನ್ನು ಕಂಡಂತೆಯೂ, ಕಾಣದುದನ್ನು ಕಾಣುವಹಾಗೂ, ಕೇಳಿದ್ದನ್ನೂ ಕೇಳಿದಹಾಗೂ, ಕೇಳದುದನ್ನು ಕೇಳಿಸುವಹಾಗೂ-ಯಾವುದೂ ಮರೆಮಾಚದೆ, ಮರೆಯದೆ, ಯಾರ ಮೆಚ್ಚಿಗೆಗೂ ತಲೆಬಾಗದೆ ಬರೆಯುತ್ತೇವೆ.

ನಾವು ಹೊರಟದ್ದು ಬುಧವಾರ. ನಮ್ಮ ಮನೆಯಿಂದ ಹೊರಟೆವು. ರಾಜ, ಚಂದಿ ಇಬ್ಬರೂ ನಮ್ಮ ಮನೆಗೆಹಿಂದಿನ ರಾತ್ರಿಯೇ ಬಂದಿದ್ದು ಬಿಡಾರ ಮಾಡಿದ್ದರು. ನಮ್ಮ ಯೋಚನೆ ಇದ್ದದ್ದು ಬೆಳಗಿನ ಝಾವವೇ ಎದ್ದು ಬೈಸಿಕಲ್‌ಗಳಮೇಲೆ ಹೊರಡಬೇಕೆಂದು ರಾತ್ರೆ ಅದೂ ಇದೂ ಕಾಡಹರಟೆ ಹೊಡೆದು ಮಲಗುವ ಹೊತ್ತಿಗೆ 1 ಘಂಟೆಯಾಗಿ ಹೋಯಿತು. ಅದೂ ಅಲ್ಲದೆ ರಾಜ, ಚಂದಿ ಇಬ್ಬರೂ ತದ್ವತ್

ಕುಂಭಕರ್ಣರೇ ಸರಿ. ರಾಜ ತನ್ನ ಲೋವರ್‌ಸೆಕೆಂಡರೀ ಪರೀಕ್ಷೇ ದಿನವೇ ಬೆಳಿಗ್ಯೆ 10 ಘಂಟೆಗೆದ್ದು ನಿದ್ದೆಗಣ್ಣಿನಲ್ಲಿ ಪರೀಕ್ಷೆಗೆ ಬಂದು ಫೈಲಾದ. ನಾನು ಚಂದಿ ಮೊದಲನೇ ವರ್ಷ ಕೂತುಕೊಳ್ಳಲೇ ಇಲ್ಲ. ಅಂತೂ ಆ ಬುಧವಾರ ಬೆಳಿಗ್ಯೆ ಅವರಿಬ್ಬರೂ ಏಳಲೇ ಇಲ್ಲ. ಕಡೆಗೆ ಕಸಗುಡಿಸುವವಳು ನುಗ್ಗಿ ಮೊದಲು ರಾಜನನ್ನ ಎಬ್ಬಿಸಿದಮೇಲೆ ಅವನು ಚಂದೀಗೇ, ನಂಗೇ ಮುಖದಮೇಲೆ ತಣ್ಣೀರ್ ಚೆಲ್ಲಿ ಎಬ್ಬಿಸಿದ—9 ಘಂಟೆಗೆ.

ಮೂವರೂ ಹೊರಟೆವು—ಒಂದು; ಪುಟ್ಟ ಹಾಸಿಗೆ, ಒಂದು ಬದಲಾಯಿಕೆಗೆ ಸಾಕಾಗುವಷ್ಟು ಬಟ್ಟೆ, ಸಂಪಾದಕರು ಕೊಟ್ಟಿದ್ದ ದುಡ್ಡು—ಚಿಲ್ಲರೆ ನಮಗೆ ಬೇಕಾದ ಸಾಮಾನು—ಎಲ್ಲವನ್ನೂ ಕಟ್ಟಿಕೊಂಡು ಹೊರಟೆವು. ಮೂವರೂ ಬಹಳ ಹುಮ್ಮಸ್ಸಿನಿಂದ ಹೊರಟೆವು. ಹಿಟ್ಲರ್ ತನ್ನ Panzer army ನ ಕಳುಹಿಸಿದ್ದನಲ್ಲಾ—ಅದಕ್ಕೂ ಅಷ್ಟು ಜಂಭವಿಲ್ಲ. ನಮ್ಮ ಮುಂದೆ ಓಡಾಡುವ ಜನರೆಲ್ಲಾ ಕ್ರಿಮಿಗಳ ಹಾಗೆ ಕಂಡು ಬಂದರು. ಅವರಿಗಾಗಲೀ ಏನಾದರೂ ಗೊತ್ತಿರಬಹುದೇ—ನಾವು ಯಾರು, ಎಲ್ಲಿಗೆ, ಯೇಕೆ ಹೊರೆಟಿದ್ದೇವೆ ಅಂತ ?—ಇಲ್ಲ. ಅವರೆಲ್ಲಾ ತಮ್ಮ ಪಾಡಿಗೆ ತಾವು ತಮ್ಮ ತಮ್ಮ ಕಷ್ಟಸುಖಗಳನ್ನೇ ಯೋಚಿಸುತ್ತಾ ಪಾಪದ ಹೊರೆ ಕಟ್ಟಿಕೊಂಡು ತಮ್ಮ ದುರ್ಮಾರ್ಗಧಲ್ಲೇ ನಡಿಯುತ್ತಿದ್ದರು. ನನಗೆ ಬಹಳ ವ್ಯಸನ ವಾಯಿತು. ಅಯ್ಯೋ ಮಾನವಾ! ಅಂದುಕೊಂಡೆ. ಆಗಲಿ ಚಿಂತೆಯಿಲ್ಲ—ಅವರ ಸುಖಕ್ಕಾಗೇ ಹೊರಟು ಅನೇಕ ಕಷ್ಟಗಳನ್ನೂ ಅನುಭವಿಸುವುದಕ್ಕೆ ಸಿದ್ಧರಾಗಿರುವ ನಮ್ಮಂತಹವರ ಕಾಲದಲ್ಲಿ ಜೀವಿಸುವುದೇ ಅವರಿಗೆ ದೊಡ್ಡ ಲಭ್ಯ. ಸದ್ಯಕ್ಕೆ ಅವರನ್ನು ಮರೆತು ನಾನು, ರಾಜ, ಚಂದಿ, ಮೂವರೂ ಮುಂದೆ ನಡೆದೆವು—ಅಯ್ಯೋ ತುಳಿದೆವು.

—ಕೇ. ಫ.

[ಸಾಕಯ್ಯಾ ನಿನ್ನ ತುಳಿದಾಟ ಮುಂದೆ ನೋಡೋಣ ಏನುಮಾಡಿದಿರೋ.] ಸಂ.

ಇಂಡ್ಯ ಪರರುಪಕಾರಿ. ಇಂಡ್ಯ ಸ್ವರ್ಗಕೆದಾರಿ,
ಇಂಡ್ಯ ಸಕಲರಿಗೆ ಹಿತಕಾರಿ—ಮುನಿದರೆ
ಇಂಡ್ಯವೇ ಮಾರಿ—ಸರ್ವಜ್ಞ

* * *

ವೇವಲ್ಲ ಕರೆಸುವುದು, ಮಾಧವನ ಕಳಿಸುವುದು,
ಸೇಂಗಾಯ ಗೆಣಸ ತಿನಿಸುವುದು—ಇಂದಿನಾ
ಬರಗಾಲ ನೋಡ—ಸರ್ವಜ್ಞ

ಅನರ್ಥಕೋಶ

ಅನುಶೂಲ : ಅನುಕೂಲವಲ್ಲದ್ದು, ಪ್ರತಿಕೂಲವಾದದ್ದು

ಊರುಭಂಗ : ಪಾರ್ಟಿ; ಒಳಜಗಳದಿಂದ ಊರು ಒಡೆದು ಹೋಳಾಗುವುದು

ಕಲ್ಲೋಲಕೋಲ್ಲೋಲ : ದೊಂಬಿ ಕಲ್ಲು ಬೀರುವಾಗ ಪೋಲೀಸಿನವರು ಗುಂಡು ಹಾರಿಸುವುದು

ಕಷ್ಟೋತ್ತರ : ನೂರೆಂಟು ಕಷ್ಟಗಳು

ಕುರಿದುಂಬಿಸು : ಅಧೈರ್ಯ ತುಂಬಿಸು

ಕೊಳ್ಳಿ-ದೆವ್ವ ; ದೆವ್ವಕ್ಕೆ ಬಲಿ ಕೊಡುವಾಗ ಹೇಳಬೇಕಾದ ಮಂತ್ರ

ಚಾಕರಿ : ಕರಿ ಟೀ

ಜಾಗರೂಕತೆ : ರೈಲಿನಲ್ಲಿ ಜಾಗ ಸಿಕ್ಕಿದಾಗ, ಅದನ್ನು ಉಳಿಸಿಕೊಳ್ಳಲು ಮಾಡುವ ಪ್ರಯತ್ನ

ಡಂಗುಬೂದಿ : ಸಿನಿಮ ತಾರೆಯರು ಉಪಯೋಗಿಸುವ ಪೌಡರ್ ಇತ್ಯಾದಿ

ದೂರ್ವಾಸನೆ : ಕೋಪ; ದೂರ್ವಾಸ ಮಹರ್ಷಿಗಳಿಂದ ಇದಕ್ಕೆ ಈ ಹೆಸರು ಬಂದಿದೆ

ನುಂಗಸಿ : ಸಿಕ್ಕಿದ್ದನ್ನೆಲ್ಲ ನುಂಗುವ ಒಂದು ತೆರನ ಮನುಷ್ಯ ಪ್ರಾಣಿ

ಪಾಸಕ್ತಿ : ಪಾಸು ಮಾಡಲು ವಿದ್ಯಾರ್ಥಿಗಳು ತೋರಿಸುವ ಆಸಕ್ತಿ

ಮಾಣಿಕ್ಯ : ಮಾಣಿಗಳಲ್ಲಿ ಶ್ರೇಷ್ಠ; ಹೇಳಿದಕೂಡಲೆ ಹೋಟೆಲುಗಳಲ್ಲಿ ತಿಂಡಿ ತಂದುಕೊಟ್ಟು, ಬಿಲ್ಲು ಕಡಿಮೆ ಬರೆದುಕೊಡುವವ

ಲಾವಣ್ಯ : ಉಪ್ಪು ಹೆಚ್ಚಾಗಿರುವಿಕೆ; ಒಂದು ರೀತಿಯ ಕೈ ತಪ್ಪು

ಷೆಡ್ಡಕ : ಮೋಟಾರ್ ಷೆಡ್‌ನಲ್ಲಿ ವಾಸಿಸುವವ; ಕಂಡಕ್ಟರ್ ಮಹಾಶಯ

ಸತೀಕ್ಷ್ಣದೃಷ್ಟಿ : ಸತಿಯನ್ನು ಈಕ್ಷಿಸುತ್ತಿರಬೇಕೆಂಬ ಕುತೂಹಲ

ಹೆಂಗಳಾರತಿ : ದೀಪಾವಳಿಗೆ ಮಾವನ ಮನೆಗೆ ಹೋದಾಗ, ಹಸೆಯಲ್ಲಿ ಕೂತ ಅಳಿಯನಿಗಾಗುವ ಉಪಚಾರ.

ಏಕೆ?

[ರಂ. ಶ್ರೀ. ಮುಗುಳಿಯವರ ಏಕೆ ಎಂಬ ಕವನವನ್ನನುಸರಿಸಿ]

ರೆಕ್ಕೆ ಇರದ ಹಕ್ಕಿಗೇಕೆ ಹಾರುವಾಸೆಯೋ?
ಫಕ್ಕನಿಂಡೊನೇಸ್ಯಗೇಕೆ ದೂಡುವಾಸೆಯೋ?
ನೊರಡು ಬಿದ್ದ ಚೀಣಗೇಕೆ ಚಿಗುರುವಾಸೆಯೋ?
ನೆರೆಯಲಿರುವ ಐರಿಗೇಕೆ ಕೂಡುವಾಸೆಯೋ?

ಬಡವ ಭಾರತಕ್ಕೆ ಏಕೆ ಬಿಡುವ ವಾಂಛನೆ?
ಬುಡದ ಕಿರಿಯ ಸಿಲೋನಿಗೇಕೆ ಸಿರಿಯ ವಾಂಛನೆ?
ಬಾಡಿ ಹೋದ ಬಳ್ಳಿಗೇಕೆ ಹೂವ ಹಂಬಲ?
ನಾಡ ತೊರೆದ ಜ್ಯೂವಿಗೇಕೆ ಊರ ಹಂಬಲ?

ನೀರ ಬಿಟ್ಟ ಮೀನಿಗೇಕೆ ಬದುಕುವಿಚ್ಛೆಯೋ?
ಕರಿಯ ಚರ್ಮ ನೀಗ್ರೊಗೇಕೆ ಬಾಳುವಿಚ್ಛೆಯೋ?
ಬಲವೆ ಇರದ ಬರ್ಮಗೇಕೆ ಬಲಿವ ಹವಣಿಕೆ?
ಬಲೆಗೆ ಬಿದ್ದಿಗಿಪ್ತಿಗೇಕೆ ಬಯಲ ಹವಣಿಕೆ?

ಕನ್ನಡವ ಕುಲಗೆಡಿಸಿ ಬನ್ನ ಬಡಿವುತ ನುಡಿದು
ಉನ್ನತದಿ ಮೆರೆವಾ ಕನ್ನಡಿಗನಿರವಿನಿಂ
ಕುನ್ನಿಲೇಸೆಂದ—' ಸರ್ವಜ್ಞ '

* * *

ವಿನಯ ಪರೀಕ್ಷೆ

ಟಾಗೂರ್‌ರವರು ಮಹಾಕವಿ ಎಂಬುದು ನಿಜ. ಇಲ್ಲವೆನ್ನುವುದಿಲ್ಲ ನಾನು. ಕೋಗಿಲೆ ಚಂಪಕ ಪೋಸ್ಟ್‌ಆಫೀಸು ಗಂಗಾಮಾತೆ ಗೋಧೂಳಿ ಮುಂತಾದ ಅಪರಿಚಿತ ಕಾವ್ಯ ಸಾಮಗ್ರಿಗಳನ್ನು ಅವರು ಪ್ರಥಮತಃ ಪಾಶ್ಚಾತ್ಯರ ಕಿವಿಯಲ್ಲು ಸುರಿ ಕೀರ್ತಿ ಗಳಿಸಿದರು. ಆದರೂ, ಅವರು ನನ್ನ ವಿಷಯದಲ್ಲಿ ಮಾತ್ರ ಸರಿಯಾಗಿ ನಡೆದುಕೊಳ್ಳಲಿಲ್ಲವೆಂದು ನಾಚಿಕೆಯಿಂದ ಹೇಳಿಕೊಳ್ಳಬೇಕಾಗಿದೆ. ೨೫ ವರ್ಷಗಳ ಹಿಂದೆ ಅವರು ಮದ್ರಾಸಿಗೆ ಬಂದಿದ್ದಾಗ, ನಾನೂ ಇತರ ಬಾಲಕರೊಂದಿಗೆ, ರೈಲ್ ಸ್ಟೇಷನಿಗೆ ಹೋಗಿದ್ದೆ. ಸ್ವಾಗತ ಸಮಿತಿಗೆ ನಮ್ಮನ್ನು ಊರ ಮಹನೀಯರು ಸೇರಿಸಲಿಲ್ಲವಾದರೂ, ನಾನು ಅದನ್ನು ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. ಪ್ಲಾಟ್‌ಫಾರಂಗೂ ನಮ್ಮನ್ನು ಯಾರೂ ಬಿಡಲಿಲ್ಲ. ಆದರೂ, ವೈಯಕ್ತಿಕವಾಗಿ ನನ್ನ ಪುರಸ್ಕಾರವನ್ನು ಕವಿವರ್ಯರಿಗೆ ಸಲ್ಲಿಸುವ ಸಲುವಾಗಿ, ನಾನು ದೀಪದ ಕಂಬವೊಂದನ್ನು ಹತ್ತಿ ಅರ್ಧದಲ್ಲೇ ಅದನ್ನು ಕಾಲಿಂದ ಬಿಗಿಹಿಡಿದು, ಟಾಗೂರ್‌ರವರು ಸುಮಾರು ಹತ್ತಿರ ಬಂದಾಗ ನಮಸ್ಕಾರ ಎಂದು ಕೂಗಿದೆ. ಆದರೆ ನಿಮ್ಮ ಕವಿವರ್ಯರು ನನ್ನ ಕಡೆ ನೋಡಲೇ ಇಲ್ಲ. ಪ್ರತಿ ನಮಸ್ಕಾರ ಮಾಡಲೇ ಇಲ್ಲ. ಈ ವಿಷಯವಾಗಿ ನಾನು ಅವರ ಆಪ್ತ ಕಾರ್ಯದರ್ಶಿಗೆ ಕಾಗದ ಬರೆದೆ. ತಹಲ್‌ವರೆಗೂ ಉತ್ತರವಿಲ್ಲ !

ದೇಶನಾಯಕರು ಈ ರೀತಿ ತಮ್ಮ ಶಿಷ್ಯರನ್ನೂ ಭಕ್ತರನ್ನೂ ಅಲ್ಲಗಳೆಯುತ್ತಾ ಬಂದರೆ ನಮಗೆ ಸ್ವರಾಜ್ಯ ಹೇಗೆ ಸಿಕ್ಕೀತು ? ಹಿಂದೂಸ್ತಾನದ ಗತಿ ಏನು ? ಎಂದು ಮುಂತಾಗಿ ಯೋಚಿಸಿ ನಾನು ಎರಡು ಮೂರು ವರ್ಷಗಳ ಕಾಲ ನಿದ್ದೆ ಮಾಡಲೇ ಇಲ್ಲ.

ಅಂದಿನಿಂದ ನಾನು ನಮ್ಮ ಮುಂದಾಳುಗಳ ಹಾಗೂ ಮುಂದಾಳಿಗಳ ವಿನಯ ಪರೀಕ್ಷೆಯನ್ನು ಇದೇ ರೀತಿ ಅವಿಚ್ಛಿನ್ನವಾಗಿ ಮಾಡುತ್ತ ಬಂದಿದೇನೆ. ನಾರಿಮನ್, ಸರೋಜಿನಿದೇವಿ, ಅಬುಲ್‌ಕಲಾಂ ಆಜಾದ್, ಅನ್ಸಾರಿ, ಜವಾಹಿರಲಾಲ ನೆಹರು, ಪಟ್ಟಾಭಿ .. ಯಾರೊಬ್ಬರೂ ಕೂಡ ನಾನು ಕುಳಿತು ಕೂಗಿದ ಕಡೆ ಕಡೆಗಣ್ಣು ಬೀರಲಿಲ್ಲ ! ರೈಲು ಸ್ಟೇಷನ್‌ನಲ್ಲಿ ಗಲಾಟೆ ಬಹಳವಾಗಿರುವುದು. ಆದರೂ, ಅದನ್ನೇ ನೆಪವಾಗಿ ಉಪಯೋಗಿಸಿ ಅವರೆಲ್ಲ ನನ್ನನ್ನು ಅಲ್ಲಗಳೆದರು. ಡಬ್ಬಿಯಿಂದಿಳಿಯುತ್ತಲೂ ತಮ್ಮ ಸುತ್ತಣ ಮಿತ್ರರಿಗೆ ಮಾತ್ರ ಹಸ್ತಲಾಘವಕೊಟ್ಟು ತಮಗೆ ಗುರುತಿದ್ದ ಹಲವು ವೈಶಾಖಭೂತಿಗಳಿಗೆ ಮಾತ್ರ ಕೈಮುಗಿದು ಮೋಟಾರ್ ಕಾರಿನ ಹತ್ತಿರಕ್ಕೆ ಸಾಗುತ್ತಿದ್ದರು. ಅಲ್ಲೇ, ರಸ್ತೆ ಆಚೆ, ಬಲಭಾಗದಲ್ಲಿ, ದೆವ್ವದ ಹಾಗೆ ನಿಂತಿದ್ದ ಆ ನನ್ನ

ದೀಪದ ಕಂಬದ ಕಡೆಯಾಗಲಿ, ಅದರ ನಡುವೆ ನೇತಾಡುತ್ತ ಗೋಳಾಡುತ್ತಿದ್ದ ನನ್ನ ಕಡೆಯಾಗಲಿ ಅವರೊಬ್ಬರೂ ನೋಡಲೇ ಇಲ್ಲ. ಕೆಲವು ಸಲ ನಾನು ಗುಂಪಿನಲ್ಲೇ ಸೇರಿ ಜೈ ಅಂದೆ; ಕಾರ ಹಿಂದೆ ಓಡಿದೆ. ಆದರೂ, ನನ್ನ ಪಾಲಿಗೆ ಅದೇ ತಿರಸ್ಕಾರ. ಇದನ್ನು ನಾನು ನನ್ನ ಅದೃಷ್ಟ, ನನ್ನ ಭವಿಷ್ಯ, 'ನನ್ನ ರಾಶಿಯ ನಸೀಬು ಎಂದೊಪ್ಪುವುದಿಲ್ಲ. ಅವರ ವಿನಯರಾಹಿತ್ಯವೆಂದೇ ಸಾರುತ್ತೇನೆ. ನಾನು ಯಃಕಶ್ಚಿತ್ ಪ್ರಜೆ ಇರಬಹುದು. ಕದನ್ನ ತಿಂಬ ಅಗಸ್ತ್ಯಭ್ರಾತನಾಗಿರಬಹುದು. ಆದರೂ, ನನಗೂ ಒಂದು ವ್ಯಕ್ತಿತ್ವವಿಲ್ಲವೆ?—ಎಂದು ಮುಂತಾಗಿ ಅವರಿಗೆಲ್ಲ ಪತ್ರ ಬರೆದೆ. ನನ್ನ ಅದಟನ್ನು ಕಂಡು ಅವರೆಲ್ಲ ಮೂಕರಾದರು. ಉತ್ತರವಾಗಿ ಕ್ಷಮಾಪಣೆ ಕೇಳಿ ಎರಡು ಗೆರೆ ಗೀಚಲು ಅವರು ಯಾರಿಗೂ ಸಹನೆ ಇರಲಿಲ್ಲ. ನನ್ನ ವಿನಯ ಪರೀಕ್ಷೆಯಲ್ಲಿ ಅವರಿಗೆಲ್ಲ ಸೊನ್ನೆ ನಂಬರು.

ಮೊನ್ನೆ ಗಾಂಧಿಜಿಯವರ ಪ್ರಾರ್ಥನಾ ಸಭೆಗೂ ಹೋಗಿದ್ದೆ. ತ್ಯಾಗರಾಯ ನಗರದ ಭಾರೀ ಮೈದಾನದಲ್ಲಿ ಆ ತ್ಯಾಗಮೂರ್ತಿ, ಎತ್ತರದ ಮಂಟಪದ ಮೇಲೆ, ಮಂಡಿಸಿದ್ದ. ಮಂಟಪದಿಂದ ಸುಮಾರು ಮುಕ್ಕಾಲು ಮೈಲಿ ದೂರದಲ್ಲಿ ನನಗೆ ಕೂರಲು ಜಾಗ ಸಿಕ್ಕಿತು. ಎರಡು ಎರಡೂವರೆ ಲಕ್ಷ ನನ್ನ ಸಹಮದರಾಸಿಗಳು 'ಶಂಡೆ ಪೋಡ'ದೆ ಕುಳಿತಿದ್ದರು. ಗಾಂಧೀಜಿ ಇನ್ನೇನು ತಮ್ಮ ಸಂದೇಶವನ್ನು ಬೀರಬೇಕು, ಅಷ್ಟರಲ್ಲಿ, ನಾನು ಎದ್ದು ನಿಂತೆ! ಇವರ ವಿನಯವನ್ನೂ ಪರೀಕ್ಷೆ ಮಾಡಿ ಬಿಡೋಣ ಅಂತ ಯೋಚಿಸಿ 'ನಮಸ್ಕಾರ' ಎಂದು ಕೂಗಿದೆ. ಕಟ್ಟಕಡೆಯದಾಗಿ, ತುತ್ತತುದಿಯಲ್ಲಿರುವ, ಇವರನ್ನೂ ನನ್ನ ಒರೆಗಲ್ಲಿನಲ್ಲಿ ಹಚ್ಚಿ ನೋಡೋಣವೆಂದು ಮತ್ತೊಮ್ಮೆ ಕೂಗಿದೆ. ನನ್ನ ಹಿಂದೆ ಕೂತಿದ್ದವರೆಲ್ಲ ಬೈಠೊ, ಉಕ್ಕಾರು, ಕೂಚುಂಡಿ, ಸಿಡ್ಡೌನ್ ಅಂತ ಗಲಾಟೆ ಮಾಡಿದರು. ನನ್ನ ಮೇಲೆ ಕಿತ್ತಲೆ ಹಣ್ಣಿನ ಸಿಪ್ಪೆಯನ್ನೆಸೆದರು. ಹತ್ತಾರು ಜನ ಹಾಹಾಕಾರಮಾಡಿ ಎದ್ದು ನಿಂತರು. ಆದರೆ, ನಾನು ಕೂರಲಿಲ್ಲ. ನನ್ನ ಉದ್ದೇಶ ಅವರಿಗೇನು ಗೊತ್ತು?

ನನ್ನ ಕೂಗು ಗಾಂಧಿಜೀಗೆ ಕೇಳಿಸಿರಬೇಕು. ಏಕೆಂದರೆ, ಅವರು ಕೇವಲ ಶಬ್ದಗ್ರಾಹಕರಲ್ಲ; ಅರ್ಥಗ್ರಾಹಕರು. ಭಕ್ತಿಯ ಮೊರೆ ಅವರ ಕಿವಿಯ ಒಳಪೊಕ್ಕು ಕೃಪಾತರಂಗಗಳನ್ನೆಬ್ಬಿಸುವುವು. ಬಾಪೂಜಿ ನನ್ನ ಕಡೆ ತಿರುಗಿದರು. ಅಮೃತಹಸ್ತವನ್ನು ಎತ್ತಿದರು. 'ಕೂತುಕೊ, ಶಿಷ್ಯಾ!' ಎಂಬ ಅರ್ಥ ಬರುವ ಹಾಗೆ ಕೈಸನ್ನೆ ಮಾಡಿದರು.

ಸಾಕು! ನಾನು ಧನ್ಯನಾದೆ. ಗಾಂಧಿಜಿಯ ವಿನಯಕ್ಕೆ ತಲೆಬಾಗಿ ಕುಳಿತೆ. ನನ್ನ ವಿನಯ ಪರೀಕ್ಷೆಯಲ್ಲಿ ನೂರಕ್ಕೆ ನೂರು ನಂಬರು ಕೊಟ್ಟೆ ... ಇನ್ನೂ ಈ ವಿಷಯವನ್ನು ಗಾಂಧಿಜಿಗೆ ಬರೆದಿಲ್ಲ. ಬರೆಯದೆ ಇದ್ದರೆ, ನನ್ನ ವಿನಯದ ಗತಿ ಏನು?

—ಶ್ರೀಕೃಷ್ಣ ಪೈ.

ಸಂಘ ಸಹಾಯಕ ಕಂಪೆನಿ ಲಿ.

[ಇದು ಷೇರ್ ಹಣದ ಶೇಖರಣೆಗಾಗಿ ಮಾಡುವ ಪ್ರಕಟಣೆ ಅಲ್ಲ.
ಕೇವಲ ಮಹಾಜನಗಳ ತಿಳುವಳಿಕೆಗಾಗಿ ಮಾತ್ರ]

ಕನ್ನಡನಾಡಿನಲ್ಲಿ ಕನ್ನಡ ನುಡಿಯ ಸೇವೆಗಾಗಿ ಭಾಷಾಸೇವಕರ ಅವಿಶ್ರಾಂತ ಪರಿಶ್ರಮದಿಂದ ನೂರಾರು ಸಂಘಗಳು ಮೊಳೆತು ಚಿಗುರಿ ಹೂ ಕಾಯಿಗಳನ್ನು ಬಿಡುತ್ತಿವೆ. ಅವುಗಳ ಸಂಚಾಲಕ ಸಂಪಾಲಕರ ಸಹಾಯಕ್ಕಾಗಿಯೇ ನಾವು ಈ ಹೊಸ ಸಂಸ್ಥೆಯನ್ನು ಜಾಯಿಂಟ್‌ಸ್ಟಾಕ್ ಕಂಪೆನಿಗಳ ಕಾನೂನಿನಂತೆ ಸ್ಥಾಪಿಸಿದೇವೆ. ಈ ವಿಷಯ ತಿಳಿದಕೂಡಲೇ, ನಮಗೆ ಸಾವಿರಾರು ಬೇಡಿಕೆಗಳೂ ಒತ್ತಾಯಗಳೂ ಮನಿಆರ್ಡರುಗಳೂ ಬರುವ ಸಂಭವವಿದೆಯಾದ್ದರಿಂದ, ಯುಗಾದಿಯ ಮರುದಿನದ ವರೆಗೂ ಯಾರೂ ಕಾಗದ ಬರೆಯಬಾರದಾಗಿ ಕೇಳಿಕೊಳ್ಳುತ್ತೇವೆ. ಅಂದೇ ನಮ್ಮ ಕಚೇರಿ ತೆರೆಯಲ್ಪಡುವುದು. ನಾವು ನೀಡುವ ಸಹಾಯ ಮುಂದೆ ಕಾಣಿಸಿದಂತೆ ಇದೆ:

(1) ಬೆಂಗಳೂರು, ಮೈಸೂರು, ಮಂಗಳೂರು, ಮಡಿಕೇರಿ, ಬಳ್ಳಾರಿ, ಧಾರವಾಡ, ಬೊಂಬಾಯಿ ಮುಂತಾದ ಮಹಾ ನಗರಗಳಲ್ಲಿರುವ ಎಲ್ಲ ಮೃದುಹೃದಯ ಕನ್ನಡಿಗ ಪುಣ್ಯವಂತರುಗಳ ಹೆಸರುಗಳನ್ನೂ ಗೊತ್ತು ಹಚ್ಚಿ ಅಕಾರಾದಿ ಮಾಡಿ ಇರಿಸಿಕೊಂಡಿದೇವೆ. ಇನ್ನುಮೇಲೆ ಕರ್ನಾಟಕ ಸಂಘದ ಕಾರ್ಯದರ್ಶಿಗಳು ಯಾರೂ ತಮ್ಮ ಅಥವಾ ಇತರ ಕೋಮುಗಳ ಗೋಮುಖವ್ಯಾಘ್ರಗಳಿಂದ ಛೀಮಾರಿ ಮಾಡಿಸಿಕೊಳ್ಳಬೇಕಾಗಿಲ್ಲ. ಯಾವಯಾವ ಜಯಂತಿಗೆ, ಯಾರಯಾರ ಸ್ಮಾರಕನಿಧಿಗೆ, ಯಾರು ಯಾರು ಸುಮಾರು ಎಷ್ಟೆಷ್ಟು ಹಣಕೊಡುವರೆಂಬ ಅಂದಾಜನ್ನೂ ಮಾಡಿದೇವೆ. ವೃಥಾಶ್ರಮ ಯಾರಿಗೂ ಬೇಕಿಲ್ಲ ಎಲ್ಲಾ ತರಹದ ನಿಧಿಶೇಖರಣೆಗೂ ನಾವು ಪ್ರಕಟಣಾಕೋಲಾಹಲವನ್ನು ನಡೆಸಿಕೊಡುತ್ತೇವೆ. ನಿಮ್ಮ ಸಂಗಡ ಪ್ರಯಾಣಭತ್ಯದಮೇಲೆ ನಮ್ಮ ಎಜಂಟರೂ ಬಂದು, ಪಶುಗಳನ್ನು ಪತ್ತೆ ಹಚ್ಚಿಕೊಡುತ್ತಾರೆ. ಅವರ ಚಾಕಚಕ್ಯತೆಯನ್ನೂ, ಹಲ್ಲು ಕಿರಿತವನ್ನೂ, ಭಾಷಾಪ್ರೇಮಿಗಳನ್ನು ಬೆರಗುಮಾಡುವ ವಿಧಾನವನ್ನೂ ಕಂಡು ನೀವು ಕಂಗೆಡುವಿರಿ. ರೂಪಾಯಿಗೆ ಎರಡಾಣೆಯಿಂದ ಹಿಡಿದು ಹದಿನಾಲ್ಕಾಣೆವರೆಗೂ ಕಮಿಷನ್ ಚಾರ್ಜುಮಾಡುತ್ತೇವೆ. ಕಮಿಷನ್ನಿನ ಪ್ರಮಾಣ ನಿಧಿಯ ಉದ್ದೇಶ ಪರಿಮಾಣಗಳನ್ನನುಸರಿಸಿರುತ್ತೆ

(2) ನಮ್ಮಲ್ಲಿ ಕನ್ನಡ ಉಪನ್ಯಾಸಕರ ಹಾಗೂ ಕನ್ನಡೀ ಅಧ್ಯಕ್ಷರ ನವನವೀನ ಪಟ್ಟಿ ಇದೆ. ಅವರನ್ನು ನಾವು ಹಲವಾರು ಬಗೆಯಾಗಿ ವಿಂಗಡಿಸಿಕೊಂಡಿದೆವೇ. ಉದಾತ್ತರು, ಮುದಾತ್ತರು, ಸ್ಫೂರ್ತಿದಾಯಕರು, ಪೂರ್ತಿಬಾಯಕರು, ಎಂಥ ಸಭೆಯನ್ನೂ ಐದೇ ನಿಮಿಷದಲ್ಲಿ ಕರಗಿಸಬಲ್ಲವರು, ಶಿವರಾತ್ರಿ ಮುಂತಾದ ಜಾಗಕಣೆ ಪ್ರಮೇಯುಗಳಲ್ಲಿ ಒದಗುವವರು, ನಿದ್ರೆಬಾರದೆ ತೊಳಲುವವರ ಶುಶ್ರೂಷೆ

ಗೊದಗುವವರು, ಮುಕ್ತಾಯಭಾಷಣಕಾರರು, ವಂದಿಮಾಗಧರು, ನಿಂದಕರು, ನೊಂದಕರು, ವೇದಿಕಾಭೂಷಣರು, ಸಭಾಭೀಷಣರು .... ಇತ್ಯಾದಿ, ಇತ್ಯಾದಿ. ನಿಮ್ಮ ಆವಶ್ಯಕ್ಕೂ, ಆರ್ಥಿಕಸ್ಥಿತಿಗೂ, ವಾತಾವರಣಕ್ಕೂ, ತಕ್ಕಂತೆ ಆರಿಸಿ, ಒಪ್ಪಿಸಿ ಸಮಯಕ್ಕೆ ಸರಿಯಾಗಿ ಸಾಗಿಸಿ ಸಿದ್ಧಗೊಳಿಸುವ ಭಾರ ನಮ್ಮದು. ನಮ್ಮ ರುಸುಮು ಎಷ್ಟೆಂದು ಬರೆದು ತಿಳಿದುಕೊಳ್ಳಿ. ನಿಮಗೆ ಖಾಯಿಷ್ಷಾದ ಜಾತಿ ಉಪಜಾತಿ ವಯಸ್ಸು ಗಾತ್ರ ತೂಕ ಸುತ್ತಳತೆ ಉಡುಪು ಗತಿ ಗುರಿ ಗಂಟಲು ಎದೆಯ ವಿಸ್ತಾರಗಳನ್ನೇ ನಾವು ಆರಿಸುತ್ತೇವೆ.

ವಿ. ಸೂ. ಪರಿಚಯ ಭಾಷಣ, ಹಾರಾತುರಾಯಿ ಸರಬರಾಜು, ವಂದನಾ ರ್ಪಣೆ, ಆಹ್ವಾನಪತ್ರಿಕಾಮುದ್ರಣ, ಆದರ ಹಂಚಿಕೆ, ಸಭಿಕರ ಸಪ್ಲೈ, ಪತ್ರಿಕೆ ಗಳಲ್ಲಿ ವರದಿ ಪ್ರಕಟಣೆ ಮುಂತಾದ ಆದ್ಯಂತ ಸಮಸ್ತ ಕೀಟಲೆ ಕೋಟಲೆಗಳನ್ನೂ ನಿಮ್ಮೂರಲ್ಲಿರುವ ನಮ್ಮ ಏಜಂಟರೇ ಸುಲಭ ಖರ್ಚಿನಲ್ಲಿ ನಿರ್ವಹಿಸಿಕೊಡುತ್ತಾರೆ. ನಿಮ್ಮೂರಿನ ಖಾಯಂ ಅಧ್ಯಕ್ಷರಿಗೆ ಭಾಷಣಗಳನ್ನು ಸಂದರ್ಭೋಚಿತ ಬರೆದು ಕೊಟ್ಟು ಓದಿಸುವುದಕ್ಕೂ ನಾವು ಏರ್ಪಾಟುಮಾಡುತ್ತೇವೆ. ಹೆಚ್ಚು ವಿವರಗಳಿಗೆ ಬರೆಯಿರಿ.

ಮತ್ತೊಂದು ವಿ. ಸೂ. ಸಂತಾಪ ಸಭೆಗಳಿಗೆ ತಕ್ಕ ಸಾವೇರಿ ಭಾಷಣ ಕಾರರು ನಮ್ಮಲ್ಲಿ ನೂರಾರು ಜನರಿರುವರು. ಅಲ್ಲದೆ, ಈಗಿನ ಸನ್ನಿವೇಶಕ್ಕೆ ಅತ್ಯ ವಶ್ಯಕವಾದ ಕ್ರಾಂತಿಕಾರಕ ಕಿಡಿಮಾತಿನವರೂ ಹಲವರು ನಮ್ಮ ಹತೋಟಿಯಲ್ಲಿ ದಾರೆ. ತರುಣ ಸಂಘಗಳಿಗಿದೊಂದು ಸುಸಮಯ.

(3) ನಿಮ್ಮ ವಾರ್ಷಿಕ ವರದಿಯನ್ನೂ ಲೆಕ್ಕಾಚಾರದ ಒಟ್ಟು ರಿಪೋರ್ಟನ್ನೂ ನಾವು ಯಾರಿಗೂ ಅರ್ಥವಾಗದಂತೆ ಆಡಿಟರೊಪ್ಪುವ ಹಾಗೆ ಪಳಗಿದ ಸಹಕಾರ ಸಂಘ ಗುಮಾಸ್ತೆ ಶಿಖಾಮಣಿಗಳಿಂದ ತಯಾರಿಸುತ್ತೇವೆ. ನಿಮ್ಮ ಲೆಕ್ಕಪತ್ರಗಳು ಎಷ್ಟೇ ಅಸ್ತಿಭಾರರಹಿತವಾಗಿ ಅಸ್ತವ್ಯಸ್ತವಾಗಿರಲಿ ನಾವು ಸರಿಮಾಡಿಸಿಕೊಡುತ್ತೇವೆ. ನಮ್ಮಲ್ಲಿ ಎಲ್ಲ ಬಗೆಯ ಎಲ್ಲ ವ್ಯಾಪಾರ ಸಂಸ್ಥೆಗಳ ಬಿಲ್ಲು ವೌಚರು ರಶೀತಿಗಳ ನಖಲುಗಳೂ ಇವೆ. ಯಾವ ಯಾವ ಕೀಲನ್ನು ತಿರುಗಿಸಿದರೆ ಎಂಥೆಂಥ ತಂಟೆ ತಕರಾರುಗಳನ್ನು ತಟಾಯಿಸಬಹುದೆಂಬುದನ್ನು ನಮ್ಮ ಕಂಪೆನಿಯ ನುರಿತಹಗಳೇ ಅಕೌಂಟೆಂಟರುಗಳು ಲೀಲಾಜಾಲವಾಗಿ ಬಲ್ಲರು. ಜನರಲ್‌ಬಾಡಿಯ ಒಪ್ಪಿಗೆಯಾದ ಮೇಲೆ ನೀವು ನಮಗೆ ನಮ್ಮ ಪಾಲಿನ ಕಮಿಷನ್ನನ್ನು ದಯಪಾಲಿಸಿದರೆ ಸಾಕು !

(4) ಚಂದಾವಸೂಲಿಗೆ ನಮ್ಮಲ್ಲಿನ ಸುಪುಷ್ಟರಾದ ಸ್ವಯಂಸೇವಕರನ್ನು ನಿಮ್ಮ ಕಾರ್ಯದರ್ಶಿಗಳು ದಿನಕೂಲಿ ಮೇರೆ ಸಂಗಡಲೇ ಕರೆದುಕೊಂಡು ಹೋದರೆ, ಹಣ, ಯಾ, ರಾಜಿನಾಮೆ ಪತ್ರ ಕೂಡಲೇ ತಂದುಬಿಡಬಹುದು.

ಇವಲ್ಲದೆ, ನಮ್ಮಿಂದ ಮಾಡಿಸಿಕೊಳ್ಳಬಹುದಾದ ಹೆಚ್ಚು ಸೇವೆಗಳಿದ್ದರೆ, ಸಂಕೋಚವಿಲ್ಲದೆ ಬರೆಯಿರಿ. ಸಹಾಯಮಾಡಲು ಸಿದ್ಧರಿದ್ದೇವೆ.

—ಆಡಳಿತಸಮಿತಿ ಪರ.

ಡಿಪೊ ಗುಮಾಸ್ತೆ ಮತ್ತು ಸಿಬ್ಬಂದಿಯರಿಗೆ

—o—

ರೇಷನ್ ಇಲಾಖಾ ಪರೀಕ್ಷೆ ೧೯೪೬-೧೯೪೭

ಅಂಕ 100.] A. ಶಾಸ್ತ್ರಭಾಗ [ಕಾಲ 3 ಗಂಟೆ

(ಕಾಗದವನ್ನುಳಿಸಿ ಕಡಮೆ ಪುಟಗಳಲ್ಲಿ ಉತ್ತರ ಬರೆಯುವವರಿಗೆ ೫ ಅಂಕ ಬಹುಮಾನ)

I ೧. ಕೂಪನುಗಳು ಹೆಚ್ಚು ಇದ್ದು, ಧಾನ್ಯ ಕಡಮೆ ಇದ್ದಲ್ಲಿ, ನೀವು ಮಾಡಬೇಕಾದ, ಆದರೆ ಮಾಡುವ, ಉಪಾಯಂಗಳೇನು? ನಿರ್ಭಯವಾಗಿ ವಿವರಿಸಿ.

೨. ರೇಷನ್ ಪದ್ಧತಿಯನ್ನು ರದ್ದುಮಾಡಿದರೆ, ನಿಮಗಾಗುವ ಕಷ್ಟನಷ್ಟಗಳನ್ನು ಕುರಿತು ಒಂದು ಅರ್ಜಿ ಬರೆಯಿರಿ.

೩. ಸುಂಕದ ಕಟ್ಟೆಯ ಗುಮಾಸ್ತೆಗೂ ನಿಮಗೂ ಇರುವ ವ್ಯತ್ಯಾಸವೇನು? ಇಬ್ಬರ ಆಸ್ತಿಪಾಸ್ತಿಗಳನ್ನೂ ಅಂದಾಜುಮಾಡಿ.

II ೧. ಬ್ಲಾಕ್ ಮಾರ್ಕೆಟ್ಟನ್ನು ಸ್ಥಿರವಾಗಿ 'ನಿಲ್ಲಿಸು'ವ ವಿಧಾನವೇನೇನು?

೨. ಮಹಾಜನಗಳಿಗೆ ಆಕ್ರೋಶಬಾರದಂತೆಯೂ ಅಧಿಕಾರಿಗಳಿಗೆ ಕೋಪಬಾರದಂತೆಯೂ, ಡಿಪೊವನ್ನು ತಿಂಗಳಿಗೆ ಎಷ್ಟು ದಿನ ಮುಚ್ಚಿರಬಹುದು? ಸೂಚಿಸಿ. ಅಷ್ಟಕ್ಕಿಂತ ಹೆಚ್ಚುದಿನ ಏಕೆ ಸಾಧ್ಯವಿಲ್ಲ?

೩. ೫೦೦ ಮೈಲಿ ಆಚೆಗಿನ ಊರೊಂದರಿಂದ ೬೦ ಪಲ್ಲ ಬೇಳೆಯನ್ನು ಎತ್ತಿನ ಗಾಡಿ, ಲಾರಿ, ರೈಲುಗಳಲ್ಲಿ ಡಿಪೋಗೆ ತರುವಾಗ, ದಾರಿಯಲ್ಲಾಗುವ ಕಾಲವಿಳಂಬ ಖರ್ಚುವೆಚ್ಚಗಳೇನು? ಮುಚ್ಚುಮರೆಮಾಡದೆ ಹೇಳಿ. ಡಿಪೋಗೆ ಬಂದ ಮೇಲೆ, ನಿಮ್ಮ 'ಬೇಳೆ ಬೇಯುವುದಿಲ್ಲ' ಎಂದು ಯಾರು ಯಾರು ಹೇಳುತ್ತಾರೆ? ಅವರಿಗೆ ಮಾಡಬೇಕಾದ ಶಾಸ್ತಿ ಏನು?

III ೧. ಇಲಿಗಳನ್ನು ಹಿಡಿಯಲು ನಿಮ್ಮ ಡಿಪೋದಲ್ಲಿರುವ ಬೋನಿನ ಒಳ ವಿಸ್ತಾರವೆಷ್ಟು? ಅಷ್ಟು ಸಾಕೆ? ಅದರ ಮತ್ತು ಇಲಿಯ ಚಿತ್ರಗಳನ್ನು ಬರೆಯಿರಿ.

೨. ಧಾನ್ಯ + ಕಲ್ಲು^{2} – ಸೋರಿದ್ದು + ಸೇರಿದ್ದು – ಕೊಟ್ಟಿದ್ದು + ಕೆಟ್ಟಿದ್ದು^{2} = 0 ಈ ಸಮೀಕರಣವನ್ನು ಸಾಧಿಸಿ.

[ಯಾವುದಾದರೂ ಎರಡು ಪ್ರಯೋಗಗಳನ್ನು ನಡೆಸಿ, ಸಾಕು]

I ಈ ಐದು ಚೀಲಗಳಲ್ಲಿರುವ ಬೇರೆ ಬೇರೆ ರಖಂ ಅಕ್ಕಿ, ಹರಳು, ಭತ್ತಗಳನ್ನು ಮಿಶ್ರಿಸಿ ಒಂದೇ ರಖಂ ಮಾಡಿ, ಅದಕ್ಕೊಂದು ಹೊಸ ಹೆಸರನ್ನಿಡಿ.

II ಡಬ್ಬಲ್ ಚೀಲದ ವಿಧಾನದಲ್ಲಿ ನಿಮ್ಮ ಮುಂದಿನ ಈ ಕಾಳಿನ ರಾಶಿಯನ್ನು ೫ ಗೋಣಿ ಚೀಲಗಳಿಗೆ ತುಂಬಿ ಹೊಲಿದು ಅನಂತರ, ಅವುಗಳನ್ನೆಲ್ಲ ಹೊರಗಿನಿಂದಲೇ, ಹೊಲಿಗೆ ತೆಗೆಯದೆ, ಕೊಟ್ಟಿರುವ ಉಪಕರಣದಿಂದ ಹತ್ತು ನಿಮಿಷಗಳಲ್ಲಿ ಖಾಲಿ ಮಾಡಿ.

III ಎಂಬತ್ತು ಸೇರು ರಾಗಿಯನ್ನು ೯೫ ಕಾರ್ಡಿಗೆ ಒಂದೊಂದು ಸೇರಿನಂತೆ ಹಂಚುವ ವಿಧಾನವನ್ನು ಪ್ರದರ್ಶಿಸಿ. (ನಿಖರವಾದ ಸೇರೊಂದನ್ನು ನಿಮಗೆ ಕೊಡಲಾಗಿದೆ).

IV ೨೦೦ ಗಜ ಬಟ್ಟೆಯನ್ನು ೧೭ ಜನಕ್ಕೆ ೪|| ಗಜದಂತೆಯೂ, ೨೩ ಜನಕ್ಕೆ ೩||| ಗಜದಂತೆಯೂ ೧೧ ಜನಕ್ಕೆ ೫|| ಗಜದಂತೆಯೂ ಹಂಚಿದ ಮೇಲೆ, ನಿಮ್ಮಲ್ಲಿ ೧೪ ಗಜ ಉಳಿಯಬೇಕು. ಹಾಗೆ ಅಳತೆಮಾಡಿ ತೋರಿಸಿ ಕತ್ತರಿಸ ಬೇಡಿ.

— ಬಿ. ಸ್ವಾ.

— o —

ಸತ್ಪುರುಷ ತತ್ವಗಳು

ಮಂದಮತಿ ನೀನೆಂದು ಮನೆಯಾಕೆ
ನಿಂದಿಸಲು ಮನಕದ ತಂದುಕೊಳ್ಳುವ ನರನು ಮೂರ್ಖನು ।
ಸಂಧಿಸಿದ ಕಲಹದಲಿ ಸೈರಣೆಯ
ಹೊಂದದಯೆ ನಾಲಗೆಯ ಸಡಲಿಸುವಾತ ಕಡುಮೂರ್ಖ ||

ಕೆಂಡಕಾರುವ ಮಡದಿಗಡಗಿ ನಡೆವವ ಜಾಣ ।
'ಕೊಂಡುಕೊಂಡು' ಎಂದೊಡನೆ ದಂಡತೆರದಾವೊಂಡನತಿ ಜಾಣ ||
ಹೆಂಡತಿಗೆ ತಲೆಬಾಗಿ ಹೆದರಿ ನುಡಿವನೆ ಜಾಣ ।
ಚಂಡಿಯೆದುರಲಿ ನಿಂತು ಹಲ್ಲ ತಾ ಕಿರಿವಾತ ಕಡುಜಾಣ ||

—ಬುಳ್ಳ.

.... ಕೊಂಚಪ್ಪಣ್ಣ ....

ನಾವು ಈ ಮನೆಗೆ ವಾಸ ಬರುವ ಮೊದಲು ಇಲ್ಲಿ ಯಾರೋ ಒಬ್ಬರು ಲಾರಿ ಡ್ರೈವರಿದ್ದರು ಆತನಿಗೂ ಮನೆ ಮಾಲೀಕನಿಗೂ ನೂರೆಂಟು ತಿಸ್ರತಿಕ್ಯಾಟಗಳಾಗಿ, ಆತನನ್ನು ಓಡಿಸುವುದಕ್ಕೋಸ್ಕರ ಈತ ಸೂರು ಕಿತ್ತು ಸೋರುವಹಾಗೆ ಮಾಡಿ, ವರಾಂಡದಲ್ಲಿ ವಾಂತಿ ನಡೆಯಿಸಿ, ಕಡೆಗೆ ಆತನ ಸಂಸಾರವನ್ನು ಹೊರಕ್ಕೆ ಸಾಗಿಸಿ, ನನ್ನನ್ನ ಒಳಕ್ಕೆ ಬಿಟ್ಟ. 15ರೂಪಾಯಿ ಹೆಚ್ಚು ಬಾಡಿಗೆ ಕೊಡಲು ಒಪ್ಪಿ ನಾನೂ ಕೃತಾರ್ಥನಾದೆ. ಮಹೋಪಕಾರವಾಯಿತು, ಎಂದು ಒಳನುಗ್ಗಿ, ನಾನು 'ಇಲ್ಲೇ ಗೃಹಸ್ಥಾಶ್ರಮವನ್ನು, ಗೃಹಿಣೀ ಮುದ್ದುಮಣೀ ಸಮೇತವಾಗಿ, ಪ್ರಾರಂಭಮಾಡಿದೆ· 32ರೂ. ಬಾಡಿಗೆ, 10ರೂ. ಸೌದೆ, 10ರೂ. ಅಕ್ಕಿ 3ರೂ. ಬೇಳೆ, 12ರೂ. ಹಾಲು 8ರೂ. ಔಷಧೋಪಚಾರ, 3ರೂ. ಮುದ್ದುಮಣಿ ಫೀಸು-ಅಲ್ಲದೆ ಬಸ್ಸು, ಸಿನಿಮಾ, ವಗೈರೆ ಇತ್ಯಾದಿಗಳನ್ನೆಲ್ಲ ನನ್ನ ಸಂಬಳ 36ರೂಪಾಯಿ, 'ಅಲ್ಪಸ್ವಲ್ಪ' ಲಂಚ ರುಷುವತ್ತು ಇವುಗಳಿಂದಲೇ ತಂದು ಸಂಸಾರ ನಿಭಾಯಿಸಿದೆ.

ಯಥಾಪ್ರಕಾರ ನಮ್ಮ ಮನೆಗೆ ಮೊದಮೊದಲು ಬರುತ್ತಿದ್ದ ಕಾಗದಗಳೆಲ್ಲವೂ ಆ ಲಾರಿ ಡ್ರೈವರಿಗೇನೆ. ಪೋಲೀಸ್ ಕೇಸ್ ನೋಟೀಸುಗಳು- ಲೈಸನ್ಸ್ ಫಾರಂಗಳು, ಹೋಟಲ್ ಬಿಲ್ಲುಗಳು, ಲಾರೀ ಪ್ರಯಾಣ ಕಾಲದಲ್ಲಿ ಆತನ ಪ್ರಣಯ ಬಲೆಗೆ ಸಿಕ್ಕಿಬಿದ್ದ ಹೆಂಗಸರ ನಿರಾಶಾ ಪತ್ರಗಳು–ಇವು ಸಾಲುಸಾಲಾಗಿ ಬಂದುವು. ಅವುಗಳನ್ನು ನಾನು ಒಮ್ಮೆ ಓದಿ ಮತ್ತೆ ಅಂಟಿಸಿ ಆತನ ಹೊಸ ವಿಳಾಸಕ್ಕೆ ವರ್ಗಾಯಿಸುತ್ತಿದ್ದೆ. ಒಂದು ದಿನ ಮಾವನವರ ಕಾಗದ ಅಂತ ಅವಳು ಓಡಿಹೋಗಿ ಬಾಗಿಲು ತೆರೆದರೆ, ಪೋಲೀಸ್ ಕಾನ್‌ಸ್ಟಬಿಲ್ ಒಬ್ಬ ಲಾರೀ ಡ್ರೈವರಿಗೆ ಬರೆದ ಗೋಗರ್ಜಿ ಬಂತು. ಮುಂದಿನ ಗ್ರೇಡೆಂಬ ಬ್ರಹ್ಮಪಟ್ಟೆ ಯಾವಾಗ ಬರುತ್ತೋ– ಈಗಿನ ಬ್ರಹ್ಮಯಜ್ಞದಲ್ಲಿ ? ಅಂತ ಕಾದುಕುಳಿತಿದ್ದ ನನಗೆ ಆ ಹಾಳು ಟಪಾಲಿನವನು ಮೊನ್ನೆ ಕೊಟ್ಟಿದ್ದು ಆತನಿಗೆ ಸೊಸೈಟಿಯಿಂದ ಬಂದ ಅಯ್ಯರು ಲಗ್ನಪತ್ರಿಕೆ ! ಸರಿ ಎರಡನ್ನೂ ಒಲೆಯೊಳಕ್ಕೆ ತಳ್ಳಿದೆವು·

ಈಚೆಗೆ ಕೊಂಚಪ್ಪಣ್ಣ ಎಂಬ ಒಬ್ಬ ಮಹಾಶಯನಿಗೆ ಯಾರುಯಾರೋ ಬರೆದ ಕಾಗದಗಳೆಲ್ಲ ನಮ್ಮ ಮನೆ ಕಿಟಕಿಯೊಳಕ್ಕೆ ಬೀಳುತ್ತಿವೆ. ಆತನೂ ಇಲ್ಲಿ ಯಾವ O. B. ರಾಯನ ಕಾಲದಲ್ಲೋ ವಾಸವಾಗಿದ್ದನಂತೆ, ನಮ್ಮ ಗ್ರಹಚಾರಕ್ಕೆ ! ಕೊಂಚಪ್ಪಣ್ಣ ! ಎಂಥ ಹೆಸರು ? ಯಾವ ಊರೋ ಆತನದು ? ಕೊಡಗೋ, ಕೋಯಮುತ್ತೋರೋ, ಕೊಂಚೂರೋ, ಕಾಸರ್ಗೂಡೋ ? ಕೊಂಚಪ್ಪಣ್ಣ........ ಏಕೆ ? ಹೆಚ್ಚಪ್ಪಣ್ಣ ಅಂತ ಹೇಳುವುದಕ್ಕೆ ಸಂಕೋಚವೋ ಏನೋ ?

ಕೊಂಚಪ್ಪಣ್ಣ ಎಂಥದ್ದೋ ಸಾಹಿತ್ಯಧ ಪ್ರೇಮಿ. ಆತನ ಭಾಷೆಯ ಯಾವುದೋ ಒಂದು ವಾರ ಪತ್ರಿಕೆಗೆ ಚಂದಾದಾರನಾಗಿದ್ದ ಅಂತ ತೋರುತ್ತೆ. ಆ ಪತ್ರಿಕೆಯನ್ನು ಅದರ ಸಂಪಾದಕರು ಈಚೆಗೆ ಪುನಃ ಪ್ರಾರಂಭಿಸಿ, ಹಳೆಯ ಬಾಕಿ ಚಂದಾದಾರರಿಗೆ ವಾರವಾರವೂ ಕಳುಹಿಸುತ್ತಿದಾರೆ. ಶುಕ್ರವಾರ ಬೆಳಗ್ಗೆ ನನ್ನಾಕೆ 'ಭಾಗ್ಯದ ಲಕ್ಷ್ಮೀ ಬಾರಮ್ಮಾ ಎ ಎ ಎ' ಅಂತ ಹಾಡುತ್ತ ದೇವರೆದುರು ಅರೆಬಗ್ಗಿ ನಮಸ್ಕಾರ ಮಾಡು ವಾಗ, 'ಕೊಂಚಪ್ಪಣ್ಣಾ' ಅಂತ ಬಾಗಿಲಲ್ಲಿ ಪೋಸ್ಟ್‌ಮ್ಯಾನ್ ಕೂಗಿ ಆ ಹಾಳು ಪತ್ರಿಕೆಯನ್ನು ಒಳಕ್ಕೆಸೆಯುವನು, ಪ್ರತಿ ಶುಕ್ರವಾರವೂ ಹೀಗೆಯೇ ಅನಾಹುತ ನಡೆ ಯುವುದು. ಆತ ಎಷ್ಟು ವರ್ಷಗಳವರೆಗೆ ಚಂದಾ ಕೊಟ್ಟಿದಾನೋ? ಒಂದು ವೇಳೆ ಆಜೀವ ಸದಸ್ಯನೋ ಏನೋ, ಪತ್ರಿಕೆ ಜೀವಿಸಿರುವ ತನಕ ಆತನಿಗೆ ಅದನ್ನು ಕಳುಹಿ ಸಲಿ, ಅಂತ? ವಿಳಾಸ ಬದಲಾಯಿಸಿ ಕಳುಹಿಸೋಣವೆಂದರೆ, ಕೊಂಚಪ್ಪಣ್ಣನ ಆವಾಸಸ್ಥಾನ ಯಾವುದೆಂದೇ ನನಗೆ ತಿಳಿಯದು. ಹೇಗೆ ಪತ್ತೆ ಹಚ್ಚುವುದು? ಬಸ್ ಕಂಡಕ್ಟರುಗಳು ಕೆಲವರನ್ನು ಕೇಳಿದೆ. ಅವರು ಮೆಂಟಲ್ ಆಸ್ಪತ್ರಿ ದಾರಿ ಹೇಳಿ ಕೊಟ್ಟರು. ನನ್ನ ಬೆನ್ನ ಹಿಂದೆ ನಕ್ಕರು. ಇನ್ನು ಮೇಲೆ ಯಾರನ್ನೂ ಕೇಳುವು ದಕ್ಕೆ ಹೋಗಬೇಡಿ ಅಂತ ಅವಳು ಬೇರೆ ಬುದ್ಧಿ ಹೇಳಿದಳು.

ಕೊಂಚಪ್ಪಣ್ಣನಿಗೆ ಒಬ್ಬ ಮಗನಿರುವನೆಂದೂ ಅವನಿಗೂ ಆತನ ಈಗಿನ ವಿಳಾಸ ತಿಳಿಯದೆಂದೂ ನನಗೆ ಮೊನ್ನೆ ಗೊತ್ತಾಯಿತು. ಏಕೆಂದರೆ, ಅವನ ತಂತಿಯೊಂದು ನನ್ನ ಮನೆಗೆ ಬಂತು. 'ಹಾಲಿ ವಾಸವಾಗಿರುವ ಮಹಾನುಭಾವ! (ನಾನು ಹೀಗೆ ಭಾಷಾಂತರಿಸಿ) ದಯಮಾಡಿ ಕೊಂಚಪ್ಪಣ್ಣನ ಸಮಾಚಾರ ತಿಳಿಸುವಿರಾ? ಎಂದು ಅವನು ಇಂಗ್ಲಿಷಿನಲ್ಲಿ ಕೋರಗಿದ್ದ. ಆದ್ದರಿಂದ, ಈ ಮನೆಯಿಂದ ಕೊಂಚ ಪ್ಪಣ್ಣ ಎಲ್ಲಿಗೋ ಕಂಬಿಕಿತ್ತು ತಪ್ಪಿಸಿಕೊಂಡಿರಬೇಕೆಂದು ನಾನು ನಿಶ್ಚಯಿಸಿದೆ. ಹೌದು, ಹಾಗೆಯೇ ಮಾಡಿರಬೇಕು ಎಂದು ಅವಳೂ ಕಿಟಕಿಯಲ್ಲಿ ಕಿತ್ತ ಕಂಬಿ ಯೊಂದರ ಖಾಲಿ ಜಾಗವನ್ನು ತೋರಿಸಿದಳು.

ಕೊಂಚಪ್ಪಣ್ಣನ ಸಾಲಗಾರರೂ, ಪಾಲುಗಾರರೂ ನೂರಾರು ಕಾಗದಗಳನ್ನು ಕಳುಹಿಸಿ ನೋಡಿದರು. ಮೊನ್ನೆ ಯಾರೋ ಒಬ್ಬರು–ಕೊಂಚಪ್ಪಣ್ಣನೇ ಇರಬೇ ಕೆಂದು ನನ್ನ ಊಹೆ–ನಡುಮನೆಯ ಗೋಡೆಯಲ್ಲಿ ಆಳೆತ್ತರದಷ್ಟು ಜಾಗದಲ್ಲಿ ತೂತು ಕೊರೆದು ಹತ್ತು ನೂರು ರೂಪಾಯಿ ನೋಟನ್ನು ಸುರುಳಿಸುತ್ತಿ ಸಿಗರೆಟ್ ಡಬ್ಬದಲ್ಲಿ ರಿಸಿರುವುದಾಗಿ ಮನೆ ವಿಳಾಸಕ್ಕೆ ಒಂದು ಕಾಗದ ಗುಜರಾಯಿಸಿದ್ದರು.

ನಾನೂ ದಿನವೂ ಅಲ್ಲಿ ಇಲ್ಲಿ ಕನ್ನ ಕೊರೆದು ಪರೀಕ್ಷಿಸಿದೆ. ಹಾಳು ಲಂಚ ಜೀವನ ಬೇಸರವಾಯಿತು. ಕೊಂಚಪ್ಪಣ್ಣನ ಕೃಪೆ ನನ್ನ ಪಿಕಾಸಿ ತುದಿಗೆ ಸೋಕಿ ದರೆ, ಗುಂಜಾ ನರಸಿಂಹನಿಗೆ ಐದು ಸೇರಕ್ಕಿ ಪೊಂಗಲ್‌ನ ಆಸೆ ತೋರಿಸಿದೆ. ಅಲ್ಲೇ ಗರ್ಗೇಶ್ವರಿ ಹತ್ತಿರ ಕೊಂಚ ಜಮೀನು ತೆಗೆಯೋಣ ಅಂತ ಅವಳೂ ಹೇಳಿದಳು.

ನನ್ನ ಸಾಲು ಕನ್ನಡ ದೆಸೆಯಿಂದ, ನಿನ್ನೆ ಸಂಜೆ ಮನೆ ಕುಸಿದು ಬಿತ್ತು. ಸದ್ಯಃ ಆಗ ಮುದ್ದುಮಣಿ ಮೇಷ್ಟರ ಮನೆಗೆ ಕ್ವೆಸ್ಚನ್ ಬರೆದುಕೊಳ್ಳುವುದಕ್ಕೆ ಹೋಗಿದ್ದ. ಅವಳು ಜವುಳಿ ಅಂಗಡಿಗೆ ಬೆಲೆ ವಿಚಾರಿಸುವುದಕ್ಕೆ ಹೋಗಿದ್ದಳು. ನಾನು ಯಥಾ ಪ್ರಕಾರ ಬೆಣ್ಣೆ ಅಂಗಡಿಗೆ ತೆರಳಿದ್ದೆ.

ಇನ್ನು ಮೇಲೆ ಆ ಮನೆಯೊಳಕ್ಕೆ ಯಾರ ವಿಳಾಸದ ಕಾಗದಗಳೂ ಬೀಳುವ ಹಾಗಿಲ್ಲ!

—ಶ್ರೀ ಗಂಗಾಧರ.

" ತಾಯೆ ಕಾಯೆ, ದೇವಿಕಾಯೆ, ಎಮ್ಮ ರಾಜ್ಯವ "

ವೈದ್ಯಕಾಲೇಜೊಂದು, ಅದಕೊಬ್ಬ ಶಾಲಾಧ್ಯಕ್ಷ.
ಗಂಗೂದಾಸನೆಂದಾತನಾ ನಿಜನಾಮು—ಆತ
ಬಲು ವಿದ್ವಾಂಸ, ವೈದ್ಯಶಾಸ್ತ್ರದಿ ಬಹು ಪ್ರಖ್ಯಾತಿ.
ಆತನಾ ಹಸ್ತಗುಣವೆನೆ—ಅಶ್ವಿನೀದೇವತೆಗಳ ಸಾಟಿ.
ವಿದ್ಯಾರ್ಥಿಗಳಿಗೆ ಬೋಧನೆಯೊಳು ಕೂಡೆ ಅವನ
ಮೀರಿಸುವರಾರಿಲ್ಲ— ಇನಿತು ಪ್ರಖ್ಯಾತಿಯಾತನಿಗೆ.
ಇಂತಿರಲು,
ಗಂಗೂದಾಸನಾ ಖ್ಯಾತಿಯನು ಕೇಳಿ, ಅಲ್ಲಿನಾ ಷಹ
ಮಜಲಿಸರು ಮೆಚ್ಚಿ, ಆತನಿಗೆ " ರಾಜ್ಯವೈದ್ಯ"ನೆಂಬಾ
ಬಿರುದಿತ್ತು, ತನ್ನಯ " ಗೌರವವೈದ್ಯ" ಪದವಿಗೇರಿಸಿದ.
ಗಂಗೂದಾಸನಿಗೆ ಅಂದು ಬಲು ಹೆಮ್ಮೆ—ರಾಜ್ಯವೈದ್ಯ
ನಾದೆನಲ್ಲಾ ಎಂದು. ಹರುಷವುಕ್ಕುತಿರೆ ಕಾಲೇಜಿಗೈ
ತಂದ. ತನ್ನ ' ವೇಳೆ 'ಯು ಬರೆ ತರಗತಿಗೆ ಬಂದು
ಕಪ್ಪುಹಲಗೆಯಮೇಲೆ ಬರೆದು—" ನಿಮ್ಮ ಶಾಲಾಧ್ಯಕ್ಷ
ಗಂಗೂದಾಸ—ಇಂದಿನಾದಿನದಿಂದೆ ರಾಜರಾ
ಕೃಪೆಯಿಂದ ವೈದ್ಯಪದವಿಗೇರಿಹನು........"
ಒಂದೆ ಉಸಿರೊಳು ಕುಣಿದು ಕೂಗಿತು ತರಗತಿಯು.
ಆರಾಜ್ಯದಾ ರಾಷ್ಟ್ರಗೀತೆಯನು—
" ತಾಯೆಕಾಯೆ, ದೇವಿಕಾಯೆ, ಎಮ್ಮ ರಾಜ್ಯವ "

—ಡಿ. ವೆಂಕಟೇಶಮೂರ್ತಿ.

ಕನ್ನಡ 'ಮಾಧ್ಯಮ' ಸಾಧ್ಯವೆ?

ನಾನು ಕನ್ನಡಿಗ, ಕನ್ನಡಿಗರ ಡಿಂಗರಿಗ, ಕನ್ನಡ ತಾಯ ಅಡಿದಾವರೆಯ ಆರಡಿ. ನಮ್ಮೂರಲ್ಲಿ ಕರ್ಣಾಟಕ ಸಂಘವೊಂದನ್ನು ನಡೆಸಲು ಹತ್ತಾರು ಸಲ ಚಂದಾ ಎತ್ತಿದವ, ಇನ್ನೂ ಹತ್ತಾರು ಸಲ ಬೇಕಾದರೂ ಚಂದಾ ಎತ್ತಲು ಸೊಂಟ ಬಿಗಿದು ನಿಂತಿರುವವ. ಶಾಲಾ ಕಾಲೇಜುಗಳಿಂದಲೂ ನಂಟರಿಷ್ಟರಿಂದಲೂ ಕನ್ನಡ ಗ್ರಂಥಗಳನ್ನು ಸಂಪಾದಿಸಿ, ಮನೆಯಲ್ಲೇ ಕನ್ನಡ ಪುಸ್ತಕಗಳ ಪುಟ್ಟ ಭಂಡಾರವನ್ನು ಕೂಡಿಸಿರುವ ಭಾಷಾ ಸೇವಕ ....ಆದರೂ, ಈಚೆಗೆ ಹಲವರು ಮಾಡುತ್ತಿರುವ ಕನ್ನಡ ಮಾಧ್ಯಮ ಚಳುವಳಿಗೆ ನನ್ನ ಬೆಂಬಲವನ್ನು ನಾನು ಕೊಡಲಾರೆ ಅದರ ಸಾಧಕ ಬಾಧಕಗಳನ್ನು ನನ್ನಂತೆಯೇ ಕೂಲಂಕಷವಾಗಿ ಆಮೂಲಾಗ್ರವಾಗಿ ಯಾರೂ ವಿಮರ್ಶಿಸಿದಂತೆ ನನಗೆ ತೋರುವುದಿಲ್ಲ. ಅದರಿಂದಾಗುವ ಕೆಡಕುತೊಡಕು ಗಳನ್ನು ನನ್ನಹಾಗೆ ಯಾವ ಮೇಧಾವಿಯೂ ಕೂತು ವಿಚಾರಮಾಡಿ ಪಟ್ಟಿಮಾಡಿ ದಂತೆ ಕಾಣುವುದಿಲ್ಲ.

ಮೊದಲನೆಯದಾಗಿ, ನಮ್ಮ ಸಂಸ್ಥಾನದ ತರುಣ ತರುಣಿಯರು ಕೇವಲ ಹಿಂದುಳಿದ ಹಳ್ಳಿ ರೈತರಹಾಗೆ, ಓಬೀರಾಯರ ಹಾಗೆ, ಕನ್ನಡವನ್ನೇ ಎಂದೆಂದಿಗೂ ಆಡುತ್ತಿದ್ದರೆ, ಪ್ರಗತಿ ಹೇಗೆ ಸಾಧ್ಯ? ದೇಶದ ದೀನದಲಿತ ಬೋರೇಗೌಡರೆಲ್ಲ ಗಾರ್ಕಿ ಚೆಕಾವ್ ಡಾಸ್‌ಟವ್‌ಸ್ಕಿ ಅರೆ ಇಸ್ಕಿ ಮುಂತಾದ ರಷ್ಯನ್ ಪ್ರಗತಿ ಸಾಹಿತಿ ಗಳನ್ನು ಆಂಗ್ಲಭಾಷೆಯಲ್ಲಾದಲೂ ಓದಿ ಅವರು ಕೆರಳಿ ಮುಂತೆರಳಬೇಡವೆ? ಇಂಗ್ಲಂಡ್ ಅಮೆರಿಕಾ ಮುಂತಾದ ಮುಂಬರಿದ ರಾಷ್ಟ್ರಗಳಲ್ಲಿ ರೈತಾಪಿ ಜನರೂ ಕೂಡ ಇಂಗ್ಲಿಷನ್ನೇ ಅಭ್ಯಾಸಮಾಡಿ ಅದನ್ನೇ ಮಾತನಾಡುತ್ತಿರುವರೆಂಬುದನ್ನು ನಾವು ಅಲ್ಲಿಗೆ ಹೋಗಿ ಬಂದಿರುವವರಿಂದ ತಿಳಿದುಕೊಂಡಿದೇವೆ. ಅವರೇಕೆ ಕನ್ನಡ ವನ್ನು ಬಳಸುತ್ತಿಲ್ಲ? ಕನ್ನಡದಲ್ಲಿ ತಿರುಳಿದ್ದರೆ, ಪ್ರಗತಿಸಾಧಕ ಪ್ರಾಣವಿದ್ದಿದ್ದರೆ, ಬುದ್ಧಿವಂತರಾದ ಪರದೇಶಿಗಳು ಅದನ್ನು ಅಭ್ಯಾಸ ಮಾಡುತ್ತಿರಲಿಲ್ಲವೆ?

ಪರಂಗಿಯವರು ತಮ್ಮ ದೇಶಗಳಿಂದ ಹೊರಬಿದ್ದು ಜಗತ್ತಿನ ಮೂಲೆಮೂಲೆಗೂ ಹರಡಿ ತಮ್ಮ ಬಾವುಟಗಳನ್ನು ಮಂಜುಗೆಡ್ಡೆಗಳ ಮೇಲೂ ಸುಡುಗುಡ್ಡಗಳ ಮೇಲೂ ನಾಟ ನೆಲೆಗೊಳಿಸಿರುವುದು ಅವರ ಎ. ಬಿ. ಸಿ. ಡಿ ಯ ಬಲದಿಂದಲ್ಲವೆ? ಅ, ಆ, ಇ, ಈ, ಉ, ಊ, ಎಂದರೆ, ಅಷ್ಟು ಉತ್ಸಾಹ ಉಕ್ಕುತ್ತದೆಯೇ? ಹೇಳಿನೋಡಿ. ಅಲ್ಲದೆ, ಕನ್ನಡಿಗರು ನಯಸ್ಥರು. ಸಾನ್ ಫ್ರಾನ್‌ಸಿಸ್ಕೊ ಸಮ್ಮೇಲನದಲ್ಲಿ ಮಾಲ ಟೊವ್‌ರವರೂ, ಲಂಡನ್ ಸಂಯುಕ್ತ ರಾಷ್ಟ್ರ ಮಹಾಸಮ್ಮೇಳನದಲ್ಲಿ ವಿಷಿನ್‌ಸ್ಕಿ ಯವರೂ, (ತಮಗೆ ಇಂಗ್ಲಿಷ್ ಬರುತ್ತಿದ್ದರೂ) ರಷ್ಯನ್ ಭಾಷೆಯಲ್ಲೇ ಭಾಷಣ ಕೊಟ್ಟು ಸಭೆಯ ಕಾರ್ಯಕಲಾಪಗಳಿಗೆ ತುಂಬ ತೊಂದರೆಯನ್ನಿತ್ತರು. ಪ್ರತಿ

ಸಲವೂ ಅವರ ಭಾಷಣಗಳನ್ನು ನಿಘಂಟು ನೋಡಿ ತರ್ಜುಮೆ ಮಾಡಿಕೊಂಡು ಇತರರು ಅಪಾರ್ಥಮಾಡಿಕೊಳ್ಳಬೇಕಾಗಿತ್ತು. ಅವರಂತೆಯೇ ಸರ್ ರಾಮಸ್ವಾಮಿ ಮೊದಲಿಯಾರ್‌ರವರು ತಮಿಳಿನಲ್ಲಿ ಮಾತನಾಡಿದ್ದರೆ,............ಅರವಂ ಅಥ್ವಾನಂ, ಎಂದು ಎಲ್ಲರೂ ಎದ್ದು ಹೋಗುತ್ತಿರಲಿಲ್ಲವೆ? ಜಟಕ ಹೊಡೆಯುವವರಿಗೂ ಕೂಡ ಬಾಡಿಗೆ ಗೊತ್ತುಮಾಡುವಾಗ, ಅವರಿಗೆ ಕನ್ನಡ ಬರುತ್ತಿದ್ದರೂ, ನಾವು ವಿನಯ ವಿನ್ಯಾಸಗಳಿಂದ ಉರ್ದುವನ್ನೇ ಉಪಯೋಗಿಸುತ್ತಿದೇವೆ. ಇತರರು ಕನ್ನಡ ಕಲಿಯುವುದಕ್ಕಿಂತ ನಾವು ಇತರರ ಭಾಷೆ ಕಲಿಯುವುದು ಹೆಚ್ಚು ಭೂಷಣ. ನಮ್ಮ ಪದವೀಧರರಿಗೆ ನಮ್ಮಲ್ಲಿ ಚಾಕರಿ ಇಲ್ಲ ಅಂದಮೇಲೆ, ನಾವು ಇಲ್ಲಿಗೆ ಹೊರಗಿನವರನ್ನೇ ಎಲ್ಲ ಹುದ್ದೆಗಳಿಗೂ ತಂದು ಸೇರಿಸಿಕೊಳ್ಳಬೇಕಾಗುತ್ತದೆ. ಪಾಪ, ಅವರ ಮೇಲೆ ಸವಿ ಕನ್ನಡವನ್ನು ಹೇರುವುದು ಅಧಿಕಪ್ರಸಂಗವಲ್ಲವೆ? ಅಕನ್ನಡತನವಲ್ಲವೆ?

ಇಂಗ್ಲಿಷೊಂದಿದ್ದರೆ ನಾವು ಎಲ್ಲಿಗೆ ಬೇಕಾದರೂ ಹೋಗಿ ಭಾಷಣ ಕೊಟ್ಟು ಬೆರಗು ಮಾಡಬಹುದು. ಪ್ರಪಂಚದಲ್ಲಿ ಎಲ್ಲೇ ಆಗಲಿ, ಅಮೆರಿಕಾ ಇಂಗ್ಲಂಡ್ ಮುಂತಾದ ಕಡೆಗಳಲ್ಲೂ, ನಮ್ಮ ಹುಡುಗರು ಭಾರಿ ನೋಕರಿ ಸಂಪಾದಿಸಿಕೊಂಡು ಸುಖವಾಗಿರಬಹುದು. ಆದರೆ, ಕನ್ನಡ ಮಾಧ್ಯಮ ಪದವೀಧರರು ಹ್ಯಾಟ್ ಬೂಟುಗಳನ್ನು ಧರಿಸಿ ಸಿಗರೇಟು ಸೇದಲು ಸಾಧ್ಯವೆ? ಕನ್ನಡ ಎಂ ಎ ಗಳು ಪಂಚೆಯನ್ನೇ ಉಡುತ್ತಾರೆ; ಕನ್ನಡ ಎಂ. ಎಸ್‌ಸಿ. ಗಳು ಉಂಡೆ ನಶ್ಯ ತೀಡುತ್ತಾರೆ; ಕನ್ನಡ ಪಿ. ಎಚ್‌ಡಿ ಗಳು ಹರಳೆಣ್ಣೆ ಸ್ನಾನಮಾಡಿ ಎಲೆ ಅಡಿಕೆ ಜಗಿಯುತ್ತಾರೆ. ಕಾಸ್ ಪೀಸ್ ಎಂದು ಕಿಚಿಪಿಚುತ್ತಾ ಚಟ್‌ಪಟ್ ಅಂತ ಠೀಕ್ಕಾಗಿ ಸ್ನೋ ಹಚ್ಚಿಕೊಂಡು ತಿರುಗಾಡಲು ಅವರು ಅಶಕ್ತರು. ಹೀಗಾದ ಮೇಲೆ ಅವರಿಗೆ ವಿದ್ಯಾಭ್ಯಾಸ ತಾನೆ ಏಕೆ? ಯಥಾಪ್ರಕಾರ ನೇಗಿಲಯೋಗಿಯಾಗಿದ್ದರೆ ಸಾಲದೆ? ಇಂಗ್ಲಿಷ್ ಕಲಿತು ದೇಶದೇಶವೇ ಕರಿ ದೊರೆಗಳಿಂದ ತುಂಬಿ ತುಳುಕಾಡಬೇಕೆಂಬ ಮೆಕ್ಕಾಲೆ ಸಾಹೇಬರ ಮಹಾಸ್ವಪ್ನ ಮಣ್ಣುಗೂಡಿದರೆ, ಆತನ ಆತ್ಮಕ್ಕೆ ಶಾಂತಿ ಎಲ್ಲಿಂದ? ಒಂದು ಹರಕು ಹ್ಯಾಟಿಗೆ ಹಳ್ಳಿ ಜನರು ಹೆದರುವ ಹಾಗೆ, ಎಂಥ ಜರೀ ರುಮಾಲಿಗೂ ಅವರು ಹೆದರುವುದಿಲ್ಲವೆಂಬುದನ್ನು ನಾವು ಅರಿಯೆವೆ?

ನೈಜಾಂರವರ ಸಂಸ್ಥಾನದಲ್ಲಿ ದೇಶಭಾಷೆಯಾದ 'ಉರ್ದು'ವೇ ಮಾಧ್ಯಮ ನಿಜ ಬಲ್ಲೆ. ಆದರೆ, ಆ ಸಂಸ್ಥಾನ 'ಮಾದರಿ ಸಂಸ್ಥಾನ'ವಾಗಿಲ್ಲ ಎಂಬುದನ್ನು ನಾವು ಪತ್ರಿಕೆಗಳ ಮೂಲಕವೂ ಭಾಷಣಗಳ ಮೂಲಕವೂ ತಿಳಿದುಕೊಂಡಿದೇವೆ. ಮಾದರಿತ್ವವು ನಮ್ಮ ಆ ಜನ್ಮಹೆಮ್ಮೆ. ಆದ್ದರಿಂದ, ಇಂಗ್ಲಿಷನ್ನು ಎತ್ತಿಹಿಡಿಯುವುದರಲ್ಲೇ ನಾವು ಮಾದರಿಯಾಗಿರೋಣ. ಅಲ್ಲಿ ಉರ್ದು ಆಡಳಿತದ ಭಾಷೆ ಆಗಿದೆ, ನಿಜ. ಆದರೆ, ಕನ್ನಡ, ಸರ್ಕಾರಿ ಕಾಗದ ಪತ್ರಗಳನ್ನು ಬರೆಯುವುದಕ್ಕೆ ಯೋಗ್ಯತೆ ಪಡೆದಿದೆಯೇ? ಆಡಳಿತದ ಹುಕುಮುಗಳಲ್ಲೂ ಮೊಖದ್ದಮೆಗಳಲ್ಲೂ

ಈಗಲೇ ನಾವು ಅನೇಕ ಇಂಗ್ಲಿಷ್ ಹಿಂದಿ ಮರಾಠಿ ಉರ್ದು ಮಾತುಗಳನ್ನೇ ಬಳಸುತ್ತಿರುವುದನ್ನು ನೋಡಿದರೆ, ಕನ್ನಡದ ಅಪೂರ್ಣತೆ ಗೊತ್ತಾಗುವುದು. ಅಲ್ಲದೆ, ಕ್ಲೈವ್, ವೆಲ್ಲೆಸ್ಲಿ, ಪಿಟ್, ಹೆಂಡರ್‌ಸನ್, ಕಿಪ್ಲಿಂಗ್, ಚರ್ಚಿಲ್, ಅಮೆರಿ, ರೂಸ್‌ವೆಲ್ಟ್ ಮುಂತಾದ ರಾಜಕಾರಣಪಟುಗಳು ಪ್ರತಿಷ್ಠೀಕರಿಸಿ ಪುಷ್ಠೀಕರಿಸಿರುವ ಇಂಗ್ಲಿಷ್‌ನಲ್ಲಿ ಆಡಳಿತವನ್ನು ನಡಸುವುದು ಒಂದು ವಿಶೇಷ ಹೆಮ್ಮೆಯಲ್ಲವೆ?

ಮತ್ತೊಂದು ವಿಷಯ. ಈಗ ಕನ್ನಡ ಮಾಧ್ಯಮ ತಂದು ಇಂಗ್ಲಿಷನ್ನು ಮೂಲೆಗೊತ್ತಿದರೆ, ವಾಚಕರು ನವಕನ್ನಡದ ಹಾಸ್ಯ, ಕವನ, ಕಥೆ, ಕಾದಂಬರಿ, ವೃತ್ತಪತ್ರಿಕೆ ಇವುಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಅವುಗಳನ್ನೆಲ್ಲ ಮೊದಲು ಇಂಗ್ಲಿಷಿಗೆ ಭಾಷಾಂತರಿಸದೆ ಇದ್ದರೆ, ಕನ್ನಡಿಗರಿಗೆ ತಿಳಿಯುವುದು ಕಷ್ಟ! ಅಲ್ಲದೆ, ನಮ್ಮ ದೇಶದಲ್ಲಿರುವ ಲಕ್ಷಾಂತರ ಇಂಗ್ಲಿಷ್ ಬೋರ್ಡುಗಳ ಗತಿ ಏನು? ಸರ್ಕಾರಿ ಕಟ್ಟಡಗಳಲ್ಲೂ, ನಾನಾ ಇಲಾಖಾಮಂದಿರಗಳಲ್ಲೂ, ಸಾರ್ವಜನಿಕ ವಾಹನಗಳಲ್ಲೂ, ಸಂಸ್ಥೆಗಳಲ್ಲೂ, ಅಂಗಡಿ ಬೀದಿಗಳಲ್ಲೂ, ಸಂದು ಗೊಂದುಗಳಲ್ಲೂ, ಇಂಗ್ಲಿಷ್ ಬೋರ್ಡುಗಳು ನಮ್ಮ ದೇಶಕ್ಕೆ ವಿಶೇಷ ಕಳೆಕೊಟ್ಟಿವೆ ಇಂಗ್ಲಿಷ್ ಓದಬಲ್ಲ ಶೇಕಡ 6 ಜನ ಕನ್ನಡಿಗರಿಗೂ, ಇಲ್ಲಿ ವಾಸವಾಗಿರುವ ಹಲ ಕೆಲವು ಇಂಗ್ಲಿಷರಿಗೂ, ಮಾತ್ರವೇ ಅವುಗಳಿಂದ ಈಗ ಪ್ರಯೋಜನ ನಿಜ. ಆದರೂ, ಆ ಬೋರ್ಡುಗಳು ನಮ್ಮ ಪ್ರಗತಿಯ ಚಿಹ್ನೆಗಳು ನಾವೂ ಚರ್ಚಿಲ್‌ರ ನಂಟರೆಂದು ಸಾರುವ ಶಾಸನಗಳು. Keep off the grass, No Smoking, Don't spit, No Thoroughfare Way, out ಮುಂತಾದವುಗಳನ್ನೆಲ್ಲ ನಾವು ಕನ್ನಡಿಸಲು ಸಾಧ್ಯವೆ? ಕನ್ನಡಿಸಿದರೆ ಚಂದ ಕಾಣುತ್ತದೆಯೆ? ಹೀಗೆ, ಹೇಳುತ್ತಾ ಹೋದರೆ, ಸಾವಿರ ಹೇಳಬಹುದು: ಸಾವಿರಾರು ರೂಪಾಯಿಗಳ ಚೆಕ್ಕುಗಳಿಗೆ ಬಡ ಕನ್ನಡದಲ್ಲಿ ಗುಂಡುಗುಂಡಗೆ ರುಜು ಮಾಡಿದರೆ ಬ್ಯಾಂಕ್ ಗುಮಾಸ್ತೆಯರು ನಮ್ಮನ್ನು ಗಮಾರರೆಂದು ಅವಹೇಳನಮಾಡುವುದಿಲ್ಲವೆ? ಕನ್ನಡ ಮಾಧ್ಯಮ ಜಾರಿಗೆ ಬಂದರೆ, ಅಯ್ಯೋ!, ಅಮ್ಮನನ್ನ "ಮಮ್ಮಿ" ಎಂದು ಕರೆಯುವ ಕೂಸುಗಳೇ ಕನ್ನಡನಾಡಿನಲ್ಲಿ ಇರುವುದಿಲ್ಲ! ಅಪ್ಪನನ್ನ ಪಪ್ಪಿ ಎಂದು ಯಾವ ಮಗು ಬಿಗಿದಪ್ಪಿಕೊಂಡೀತು? ಛೆ! .. ನಮ್ಮ ಸಾಂಸಾರಿಕ, ಸಾಮಾಜಿಕ, ಆರ್ಥಿಕ, ನಾಗರಿಕ, ರಾಜಕೀಯ ಜೀವನವೇ ಸಪ್ಪೆಯಾಗಿ ಬಿಡುತ್ತದೆ. ಇಡೀ ಶಿಸ್ತುಮೇ ಸಡಿಲವಾಗುತ್ತದೆ! ಬೇಡ. ಅದನ್ನ ಯೋಚನೆಮಾಡಿದರೆ, ಯಾಕೊ, ನನ್ನ ಬ್ರೆಯಿನೇ ಕೊಂಚ ಡಿಜನರೇಟಾಗುತ್ತಿದೆ........

—ರೇವಣ್ಣ.

—o—

—** ಕೂಳೂರು ಪತ್ರ **—

ಶ್ರೀ|| ಸಮಾನರಾದ ಕೆಂಚೇ ಮಾವಯ್ಯನ ಸಮುಕ್ಷಮದಲ್ಲಿ, ಕೂಳೂರು ಲಿಂಗಯ್ಯನ ಮಗ ನರಸಯ್ಯನ ಶರಣಾರ್ತಿ. ನೀವು ಮೊನ್ನೆ ಬರೆದ ಕಾಗದ ಬಂದು ತಲಪಿ ಸಕಲವೂ ತಿಳಿಯಿತು. ಷಹರಿನಲ್ಲಿ ರಾಗಿ ಸಿಗುಲ್ಲ ಅಕ್ಕಿ ಕೊಡುತ್ತಾರೆ ಎಂಧು ಬರೆದಿದ್ದೀರಿ. ನಿಮ್ಮ ಪುಣ್ಯ. ನಮ್ಮ ಹಳ್ಳಿಯಲ್ಲಿ ಮಳೆಬಿದ್ದು ಮೂರು ತಿಂಗಳಾಯಿತು. ಬರೀ ಮೋಡ ಕವಿಯುತ್ತೆ. ಬಾಯಿ ಬಿಡುತ್ತೇವೆ, ಉಸಿರು ಬಿಡುತ್ತೇವೆ. ಮೋಡ ಓಡಿ ಹೋಗುತ್ತೆ. ಹೀಗಾಗಿ ನೀರಿಗೆ ಕಷ್ಟ. ದನಕರುಗಳನ್ನು ಕಾಡಿಗೆ ಅಟ್ಟಿದ್ದಾಯ್ತು.

ಮನೆಯಲ್ಲಿ, ಬೀಜಕ್ಕೆ ಅಂತ ಸ್ವಲ್ಪ ಭತ್ತ ಮಡಗಿದ್ದಿವಿ ಮೊನ್ನೆ ಷಹರಿನಿಂದ: ಯಾರೋ ಕ್ಷಾಮನಿವಾರಣೆಗೆ ಎಂದು ಇಲ್ಲಿಗೆ ಬಂದಿದ್ದರು. ಮೂರು ಜನ ಸಿಬ್ಬಂದಿ ಜತೆಗೆ—ಊರಿನ ಗೌಡ ಅಂತ ನನಗೆ ಹೇಳಿ ಕಳಿಸಿದರು. ನಾನು ಹತ್ತು ಗಂಟೆಗೆ ಹೋಗಿ ಮುಸಾಫರಖಾನೇಲಿ ಅವರನ್ನು ಕಂಡೆ. ಇಲ್ಲಿ ಎಷ್ಟು ಬೆಳೆ ಆಗಿದೆ, ಎಷ್ಟು ಫಸಲು ಬಂದಿದೆ, ಲೆಕ್ಕಕ್ಕೋಸ್ಕರ ಬಂದಿದ್ದೀವಿ. ನಿಮುಗೆಲ್ಲಾ ಕಂದಾಯ ಮಾಫಿ ಮಾಡಿಸ್ತೀನಿ ಎಂದರು. ಜತೆಗೆ, ನಾವೇನೂ ತಂದಿಲ್ಲ ಈವತ್ತು ಊಟಕ್ಕೆ ನೀವು ಏನಾದರೂ ಏರ್ಪಾಡು ಮಾಡಿಸಿ, ಅಡಿಗೆಯವನೂ ಬಂದಿದ್ದಾನೆ. ಅವನಿಗೆ ಬೇಕಾದ ಲವಾಜಮೆ ನೋಡಿಕೊಳ್ಳಿ—ರೂಪಾಯಿ ಎಷ್ಟಾಗುತ್ತೋ ಕೊಡುತ್ತೇನೆ ಎಂದರು, ಪಾಪ! ದೂರದಿಂದ ಬಂದವರು, ನಮುಗೋಸ್ಕರ ಬಂದವರು, ಎಂದು ಅವರಿಗೆ, ಬೀಜಕ್ಕೆ ಎಂದು ಇಟ್ಟಿದ್ದ ಭತ್ತ ಹತ್ತುಸೇರು ಕಳಿಸಿದೆ-ಈಗ ಮಳೆ ಬಂದರೆ ಬರಲಿ ಬಿಟ್ಟರೆ ಬಿಡಲಿ ಎನ್ನುವಂತಾಗಿದೆ—

ಷಹರಿಗೇ ಬಂದು ಬಿಡೋಣ ಎನ್ನಿಸುತ್ತೆ. ನಾನೂ ನಿಂಗಿ ಮೂರೇ ಮಕ್ಕಳು. ಮನೆಯಲ್ಲೇನೂ ಇಲ್ಲ— ದನಕರುಗಳು ಕಾಡಿಗೆ ಹೋಗಿವೆ. ಬೀಗ ಹಾಕಿದರೂ ಆಯಿತು ಇಲ್ಲದಿದ್ದರೂ ಪರವಾಗಿಲ್ಲ. ನೀನು ಸ್ವಲ್ಪ ಧೈರ್ಯಕೊಟ್ಟು ಎಲ್ಲಾದರೂ ಗಿರಣಿಯಲ್ಲಿ ಕೆಲಸ ಕೊಡಿಸುತ್ತೇನೆ ಎಂದರೆ ನಾಳೇನೇ ಬಂದು ಬಿಡುತ್ತೇವೆ. ನಿಂಗೀಗೆ ನಿಮ್ಮನ್ನೆಲ್ಲಾ ನೋಡಬೇಕು ಎಂದು ಆಸೆ.

ನಿಮ್ಮ ಜವಾಬನ್ನೇ ಮರು ಟಪಾಲಿಗೆ ಎದುರು ನೋಡುತ್ತಿದ್ದೇನೆ.

ನಿಮ್ಮ ಅಳಿಯ,

ನರಸಯ್ಯನ ಋಜು.

ಮುಸಲಾ

ಅಣು ಬಾಂಬಿನ ಪ್ರಯೋಗವೊಂದು ಸಮುದ್ರದಲ್ಲಿ ಇಷ್ಟರಲ್ಲೇ ಪರೀಕ್ಷಾರ್ಥವಾಗಿ ನಡೆಯುವುದಂತೆ ಸಿಡಿವ ಯೂರೇನಿಯಂ ಅಣುಗಳು ಸಮುದ್ರದಲ್ಲಿವೆಯಂತೆ. ಈ ಬಾಂಬಿನ ಸಿಡಿತ ಮುಸಲಾ ಜೋರಾಗಿ ಆಯಿತು ಅನ್ನಿ. ಸಮುದ್ರದಲ್ಲಿರುವ ಅಣು ಯೂರೇನಿಯಂ ಎಲ್ಲಾ ಪಟಾಕಿ ಸರ ಹತ್ತಿಕೊಂಡಂತೆ ಚಟ ಪಟ ಎಂದಿತು ಅನ್ನಿ - ಅಲ್ಲಾ! ಮುಸಲಾ ಸಮುದ್ರಾನೇ ಘಟೋ ಪಟ ಆಯಿತು ಅನ್ನಿ - ಭೂಮಾತೆ ಎದೆ ಸೀಳಿ ಹೋಗುಲ್ಲವೇ, ಅಂದರೆ ಭೂಲೋಕ ನಾಲ್ಕಾರು ಸಣ್ಣ ಲೋಕ ಆಯಿತು ಅನ್ನಿ. ಆವಾಗ ಒಂದೊಂದು ಹೋಳೂ ಮಿಕ್ಕ ಗ್ರಹಗಳನ್ನು ಸಾಕಷ್ಟು ಸೆಳೆಯಲಾರದೆ, ತಾನೇ ಗ್ರಹಗಳಿಗೆ ಮರಿ ಗ್ರಹಗಳಾಗಲೇ ಬೇಕು ಅಲ್ಲವೇ –

ಈಗ ನೋಡಿ, ಚಂದ್ರ ನಮಗೆ ಕುಟ್ಟಿಗ್ರಹ. ಆದರೂ ಆದರ ಪ್ರಭಾವನೋಡಿ. ಚಂದ್ರಮುಖಿಯನ್ನು ಕಂಡರೆ ಸಾಕು ಅಲ್ಲೇ ಹಳೆ ನಳಚರಿತ್ರೆ - ರಾಮಾಯಣ - ಮಹಾಭಾರತಗಳು – ಹೆಚ್ಚೇಕೆ! ನಮ್ಮ ಕಾಲೇಜು ಗಲಭೆ ಕೂಡ ಅದೇ ಕಾರಣದಿಂದ, ಹೀಗಿರುವಾಗ - ಆ ಚಂದ್ರನ ಸುತ್ತ ನಮ್ಮ ಲೋಕದ ಚೂರುಗಳೇ ಸುತ್ತುವಂತಾದರೆ - ನಮ್ಮ ಹಳೇ ಸೇಡನ್ನು ಚಂದ್ರ ವಾಸಿಗಳ ಮೇಲೆ ತೀರಿಸಿಕೊಳ್ಳಬಹುದಲ್ಲವೇ ?

ಅಂತೇ - ಈ ಕುಜನಿಂದಲೇ ನಮ್ಮ ದೇಶದಲ್ಲಿ ಯುದ್ಧಗಳು ಎಂದು ಎಲ್ಲರಿಗೂ ತಿಳಿದ ವಿಷಯ. ನಮ್ಮ ಲೋಕದ ಚೂರೊಂದು ಕುಜನ ಸುತ್ತ ಸುತ್ತಲಾರಂಭಿಸಿದರೆ, ಕುಜನ ಪಾಡು !

ಹಾಗೇ ಚೂರು ಚೂರುಗಳು ಶುಕ್ರನ ಸುತ್ತ ಗುರು ಸುತ್ತಲೂ ಹಾರಾಡಬಹುದು ಅಲ್ಲವೇ ?—

ಕಡೆಗೆ ಧೂಮ ಕೇತುಗಳೂ ಈ ಗಲಾಟೆಯಲ್ಲಿ ಬಾಲ ಮುದುರಿಕೊಂಡು ಓಡಿ ಹೋಗಬೇಕು ಇಲ್ಲದೆ ಇದ್ದರೆ ಅವುಗಳ ಸುತ್ತಲೂ ನಕ್ಷತ್ರೀಕನಂತೆ ನಮ್ಮ ಲೋಕದ ಚೂರು ಸುತ್ತಲು ಆರಂಭಿಸಿ ಬಿಡಬಹುದು –

– ಅಲ್ಲಾ! ಹೀಗೆ ಯೋಚಿಸುತ್ತಿದ್ದಾಗ - ಈ ಪರೀಕ್ಷಾ ಪ್ರಯೋಗವನ್ನೇ, ಮುಂದಕ್ಕೆ ಹಾಕಿದ್ದಾರೆ ಎಂಬ ಸುದ್ದಿ —

—ಯಾಕೆ ನನ್ನ 'ಭವಿಷ್ಯ' ಅವರಿಗಾಗಲೇ ತಿಳಿಯಿತೇ ?

—ಘಾ ರಾ ವಾ ರ.

—● ಸಂಕ್ರಾಂತಿ ಫಲ ●—

ಯುಗಾದಿಯ ಮಾರನೆಯ ದಿನ. ಎಲ್ಲೆಲ್ಲಿಯೂ ಹಬ್ಬದ ಕೋಲಾಹಲ. ಆದರೆ ಸಿಂಹಗಳ ಮುಖವೆಲ್ಲಾ ಬಾಡಿವೆ. ಇಡೀ ಸಿಂಹ ಜಾತಿಯಲ್ಲಿಯೇ ಒಬ್ಬರಿಗಾದರೂ ಸಂತೋಷವಿಲ್ಲ ಏಕೆ? ಹಿಂದಿನ ದಿನ ಯುಗಾದಿಯನ್ನು ಎಷ್ಟೋ ಸಂಭ್ರಮದಿಂದ ನೆರವೇರಿಸಲಿಲ್ಲವೆ? ಅಹುದು. ಆದರೆ, ಸಾಯಂಕಾಲ ಪಂಚಾಂಗ ಶ್ರವಣ ಕಾಲದಲ್ಲಿ, ಪುರಾಣ ಮಂಟಪದಲ್ಲಿ ಹೊಸವರ್ಷದ ಫಲಹೇಳುವಾಗ ಕಾನನಪುರೋಹಿತ ಗೋವಾಚಾರ್ಯರು ಹೇಳಿಯೇಬಿಟ್ಟರು.

'ಸಂಕ್ರಾಂತಿ ಪುರುಷನ ಈ ವರ್ಷದ ಹೆಸರು ಘೋರ'. ಇದರಿಂದ ಶೂರಜನರಿಗೆ, ಸುರಗೀಪುಷ್ಪ ಹವಳ ಹಾಲು ಸಿಂಹ, ಧನುಸ್ಸು ಇವುಗಳಿಗೆ ಅರಿಷ್ಟವೂ, ಗಂಗಾನದೀ ಜಲಶೋಷಣವೂ, ಬಿಳಿಬಣ್ಣದ, ಕಾವಿಬಟ್ಟೆಯ ನಾಶನವೂ, ಬ್ರಾಹ್ಮಣ ವೃದ್ಧಿಯೂ, ಪಶ್ಚಿಮ ದೇಶವಾಸಿಗಳಿಗೆ ಅರಿಷ್ಟವೂ ಆಗುತ್ತದೆಯೆಂದು'. 'ಮೃಗರಾಜಾರಿಷ್ಟಂ' ಎಂದೇ ಅಂದರು.

ಹೀಗೆಂದ ಕೂಡಲೇ ಸಭೆಯೆಲ್ಲವೂ ನಿಶ್ಶಬ್ದ. ಮೃಗಗಳೆಲ್ಲವೂ ಅವಾಕ್ಕು-ಸಿಂಹಗಳಿಗೆ ಸಿಡಿಲು ಬಡಿದಂತಾಯಿತು ಗರುಕೆ ಅಲ್ಲಾಡಿದರೂ ಕೇಳುವಂತಹ ಸ್ತಬ್ಧತೆ ಆದರೆ ಒಂದು ಕ್ಷಣ ಮಾತ್ರ. ಮರುಕ್ಷಣದಲ್ಲಿ ನೆಲಗುಡುಗಿದಂತೆ ಒಂದು ಶಬ್ದವು ಎದ್ದಿತು. ಸಿಂಹಗಳೆಲ್ಲಾ ರೋಷದಿಂದ ಕಂಪಿಸಲಾರಂಭಿಸಿದುವು ಗುಡುಗಿನ ಶಬ್ದವು ಹೆಚ್ಚಿತು. ಗೋವಾಚಾರ್ಯರು ಮಾತ್ರ ಪ್ರಶಾಂತತೆಯಿಂದ ಹೊಳಲ ಕೊಡುವ ಧ್ವನಿಯಿಂದ ಮುಂದುವರೆಯಲು ಆರಂಭಿಸಿದರು. ತಟಕ್ಕನೆ ಮಿಂಚಿನಂತೆ ನೆಗೆದು ಸಿಂಹವೊಂದು, ಆಚಾರ್ಯರನ್ನು ಒಂದೇಪೆಟ್ಟಿನಿಂದ ಕೆಡವಿ, ಬಾಯಲ್ಲಿ ಕಚ್ಚಿಕೊಂಡು, ಭಂಗಿಸಿ, ಹಾರಿ, ಅದೃಶ್ಯವಾಯಿತು—ಗೋವಾಚಾರ್ಯರ ಪೀಠ ಮಾತ್ರ ಉಳಿಯಿತು.

ಕೋಲಾಹಲ ಕೇಳಬೇಕೆ? — ಮೃಗಗಳೆಲ್ಲವೂ ಚಲ್ಲಾಪಿಲ್ಲಿಯಾದುವು. ಗೋಷ್ಠಿಯು ಈ ರೀತಿ ಕೊನೆಗೊಂಡಿತು.

ಆದರೆ ಸಿಂಹಗಳು ವ್ಯಸನದಲ್ಲಿ ಮುಳುಗಿದುವು. ಜಾತಿಗೇ ಅರಿಷ್ಟ! ಪಂಚಾಂಗ ಹರಿದರೆ ನಕ್ಷತ್ರ ಹೋಯಿತೇ? ಪಂಚಾಂಗ ಹೇಳುವ ಗೋವಾಚಾರ್ಯರನ್ನು ನಿರ್ಮೂಲಮಾಡಿದರೆ, ಫಲವನ್ನು ನುಂಗಿದ ಹಾಗಾಯಿತೆ? ಫಲವೇ ತಮ್ಮನ್ನು ನುಂಗುವಂತಿದೆಯಲ್ಲ! ಇದನ್ನು ನಿವಾರಿಸಲು ಸಮಸ್ತ ಸಿಂಹಗಳ ಬಹಿರಂಗ ಸಭೆಯು ನಡೆಯಲೇರ್ಪಾಡಾಯಿತು—ಮಾರನೇ ದಿನ.

ವರ್ಷದ ತೊಡಕ್ಕಿನ ದಿನ ದೊಡ್ಡ ಬಹಿರಂಗ ಸಭೆ. ಕಳವಳ ವ್ಯಾಕುಲ, ತುಂಬಿದ ಸಿಂಹಗಳೆಲ್ಲವೂ ಸೇರಿದ್ದುವು. ನಡುಗುವ ಧ್ವನಿಯಲ್ಲಿ ಕಾಕುಂಭನೆಂಬ ಅಧ್ಯಕ್ಷ, ಸಭೆಯ ಉದ್ದೇಶವನ್ನೂ, ಕಾರಣಗಳನ್ನು ತಿಳಿಸಿದನು.

ಮೊದಲು ಮಾತನಾಡಿದುದು ಹಿರಿಸಿಂಗನೆಂಬ ಕೊಬ್ಬಿದ ಸಿಂಹ. 'ಎಪ್ಪೈ ಸಿಂಹ ಜಾತಿಗೆ ಸೇರ್ದ ಭಾತೃ ಭಗಿನಿಯರೇ; ಸಿಂಹಗಳಿಗೆ ಅರಿಷ್ಟವಂತೆ. ಹೇಳಿದವರಾರು? ಗೋವಾಚಾರ್ಯರು. ಪಂಚಾಂಗ ಬರೆದವರಾರು? ಗೋವಾಚಾರ್ಯರು? ಅವರಿಗೂ ನಮಗೂ ಸಹಜವಾದ ವೈರಿತನವಿದ್ದೇ ಇದೆ. ಅವರಿಗೆ ವೃದ್ಧಿಯಂತೆ–ನಮಗೆ ಅರಿಷ್ಟ ವಂತೆ. ಇದಕ್ಕೆ ನಿವಾರಣೋಪಾಯ ಒಂದೇ! ಪಂಚಾಂಗ ಬರೆದ ಗೋವಾಚಾರ್ಯರ ವಂಶ ನಿರ್ಮೂಲನೆ! ಅದೇ ನನ್ನ ಸಲಹೆ! ಸಂಖ್ಯೆಯಲ್ಲಿ ನಾವು ಅವರಿಗಿಂತ ಮಿಗಿಲಾಗಿ ದ್ದೇವೆ—ಈ ಅಡವಿಯ ಆಡಳಿತದಲ್ಲಿ ನಾವು ಹೆಚ್ಚಾಗಿ ಪಾತ್ರವಹಿಸಿ) ಗೋವಾ ಚಾರ್ಯರು ಹುಟ್ಟಲೇಇಲ್ಲ ಎಂದೆನಿಸಬೇಕು. (ಸಭೆಯಲ್ಲಿ ಲಾಂಗೂಲ ತಾಡನಗಳು.)

ನಂತರ ಧಾಂಡಿಭನೆಂಬಸಿಂಹವು ಎದ್ದು "ಸಾಧು! ಸಾಧು! ಹಿರಿಸಿಂಗನು-ನಮಗೆಲ್ಲಾ ಆದರ್ಶಪ್ರಾಯವಾಗಿ ಅಮೂಲ್ಯ ಮಾತುಗಳನ್ನು ಹೇಳಿದ್ದಾರೆ. ಈ ಅರಣ್ಯದ ಆಡಳಿತ ದಲ್ಲಿ ಶೇಕಡಾವಾರುಪ್ರಾತಿನಿಧ್ಯ ನಮ್ಮದೇ! ಅನೇಕ ಸನ್ನಿವೇಶಗಳಲ್ಲಿ ಶೂರರೆನಿಸಿಕೊಂಡ ಅನುಭವಸ್ಥರಾದ ಅರ್ಭಿಡರನ್ನು ಬಿಟ್ಟರೆ ಇದಕ್ಕೆ ಅರ್ಹತೆಯುಳ್ಳವರಾರು?" ಎಂದಿತು.

ಪಡ್ಡೆ ಹುಲಿಯೊಂದು ಎದ್ದು ನಿಂತು, ಇಷ್ಟೇ ಅಲ್ಲ ಕಲಿಯುಗವು ಇಷ್ಟರಲ್ಲೇ ಮುಗಿದು ಕೃತಯುಗವು ಆರಂಭಿಸುತ್ತದೆ. ಮಾಂಸಾಹಾರಿಗಳು ನಿರ್ಮೂಲವಾಗಿ ಶಾಖಾಹಾರಿಗಳು ಬದುಕುತ್ತಾರೆ ಎಂದು ಗೋವಾಚಾರ್ಯರು ಹೇಳಿಕೆಯಿತ್ತು ಪ್ರಚಾರ ಮಾಡುತ್ತಿದ್ದಾರೆ ಅವರ ವಂಶವನ್ನೇ ನಿರ್ಮೂಲ ಮಾಡಿದರೆ ಕೃತಯುಗವು ಬಂದರೂ ನಾವೇ ಉಳಿದಿರುತ್ತೇವೆ.

ಇಷ್ಟುಹೊತ್ತು ಸುಮ್ಮನಿದ್ದ ಅರ್ಭಿಡನು ಎದ್ದು ಹೇಳಿತು ಹಿರಿಸಿಂಗರೆಂದುದನ್ನು ನಾನು ಸಂಪೂರ್ಣ ಅನುಮೋದಿಸುತ್ತೇನೆ. ಮೃಗರಾಜಾನಾಂ ಅರಿಷ್ಟಂ ಎಂದ ಗೋವಾ ಚಾರ್ಯರೇ ಇಂದು ಗೈರುಹಾಜರು. ಗೈರುಹಾಜರು ಮಾಡಿಸಿದ ನಮ್ಮ ಧಾಂಡಿಬನು ಇಲ್ಲಿಯೇ ಇದ್ದು ನಮಗೆ ಮುಖಂಡನಾಗಿರುವನು ಇದರಿಂದಲೇ ಪಂಚಾಂಗ ಫಲವು ಸುಳ್ಳೆಂದು ಕಾಣುವುದಿಲ್ಲವೇ? ನಮ್ಮಅರಿಗಳ ನಾಶ ಕಾರ್ಯವನ್ನು ನಾನು ಮರಿಗಳಿಂದ ಮಾಡುತ್ತೇನೆಂದು ಈ ಮೀಸೆಗಳ ಮೇಲೆ ಪ್ರಮಾಣ ಮಾಡುತ್ತೇನೆ! (ಕೋಲಾಹಲ).

ಅಮೇಲೆ ಈ ಕೆಳಗೆ ಕಂಡ ಠರಾವುಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

೧. ಅರಣ್ಯ ಸಲಹೆ ಮಂಡಳಕ್ಕೆ ಹಿರಿಸಿಂಗರನ್ನೂ, ಅರ್ಭಿಡರನ್ನೂ ಒಡನೆಯೇ ಸೇರಿಸಿಕೊಳ್ಳಬೇಕೆಂದು ಒತ್ತಾಯಪಡಿಸಬೇಕು.

೨ ಗೋವಾಚಾರ್ಯನ ಸಂತತಿಯನ್ನು ಸಿಕ್ಕಿದಾಗ ಸದೆಬಡಿಯಬೇಕು-ಬೇರು ಗಳಿಗೇ ಕೊಡಲಿ ಪೆಟ್ಟು ಹಾಕಬೇಕು.

೩. ಸಿಂಹಗಳೆಲ್ಲವೂ ಸಮಸ್ತವಿಚಾರಗಳಲ್ಲಿಯೂ ಗೂಢವಾಗಿ ಸುದ್ದಿಗಳನ್ನು ಶೇಖರಿಸಿ ಹಿರಿಸಿಂಗ ಅರ್ಭಿಡರಿಗೆ ತಿಳುಹಬೇಕು ಸಮಯಬಿದ್ದಲ್ಲಿ ನರಸಿಂಗನಂತೆ ಕೂಡಿ ನಟಿಸಬಹುದು.

೪ ಪ್ರತಿ ಅಮಾವಾಸ್ಯೆಯೂ ಸಿಂಹಗಳೆಲ್ಲಾ ಗುಪ್ತವಾಗಿ ಸಭೆಸೇರಿ ಪರ್ಯಾಲೋಚನೆ ಮಾಡತಕ್ಕದ್ದು. ನಂತರ ಧನ್ಯವಾದಗಳೊಡನೆ ಸಭೆಯು ಮುಕ್ತಾಯವಾಯಿತು.

— ವೀರಣ್ಣ.

ದಿ ಫ್ರೆಂಡ್ಸ್ ಎಂಪ್ರೋರಿಯಂ

ಜನರಲ್ ಮರ್ಚೆಂಟ್ಸ್, ಅಂಡ್ ನ್ಯೂಸ್ ಏಜೆಂಟ್ಸ್, ಬಸವನಗುಡಿ ಪೋಸ್ಟ್.

(ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ)

● ಅಯ್ಯಂಗಾರ್ಯರ ಶ್ರೇಷ್ಠವಾದ ಕಾಂಡಿಮೆಂಟ್ಸ್‌ಗಳು. ● ಸುಗಂಧ ದ್ರವ್ಯಗಳು.
● ಏವರೆಷ್ಟ್ ಬ್ರಾಂಡ್ ಕಾಫಿಪುಡಿ. ● ನೂತನವಾದ ಆಟದ ಸಾಮಾನುಗಳು.
● ಸ್ಟೇಷನರಿ ಸಾಮಾನುಗಳು. (ಕನ್ನಡ, ತಮಿಳು, ಇಂಗ್ಲೀಷ್ ಬುಕ್ಕುಗಳು, ಪಂಚಾಂಗಗಳೂ ಮತ್ತು ಡೈರಿಗಳೂ, ವಗ್ಗೈರೆ ದೊರಿಯುತ್ತವೆ.)


ಸೋಲ್ ಏಜೆಂಟ್ಸ್ :

ಶ್ರೀಮರ್ಾ ದೇವುಡುರವರಿಂದ ರಚಿತವಾದ ಅಮೇರಿಕದ ಕಥೆ ಬೆಲೆ ೧ ೦ ೦

ದಿ ಮೈಸೂರು ಕೋ-ಆಪರೇಟಿವ್ ಎಜುಕೇಷನಲ್ ಸೊಸೈಟಿ ಲಿಮಿಟೆಡ್‌ನಿಂದ
ಪ್ರಚುರವಾಗುವ ಮಕ್ಕಳಭಂಡಾರ. ೧ ವಿಚಿತ್ರ ಸೇತುವೆ ಬೆಲೆ ೦ ೩ ೦
೨ ಗಣೇಶನ ಕಥೆ ಬೆಲೆ ೦ ೩ ೦

ಆಜಾದ್ ಪಬ್ಲಿಕೇಷನ್ಸ್‌ರವರ ರಕ್ತಕೋಟೆಯ ವಿಚಾರಣೆ ಜೈಹಿಂದ್ I ೦ ೧೨ ೦
II ೦ ೪ ೦ III ೦ ೪ ೦ IV ೦ ೮ ೦ V ೧ ೦ ೦
ಜೈ ಹಿಂದ್ ಕ್ಯಾಲೆಂಡರ್ ಬೆಲೆ ೦ ೪ ೦ ಒಂದೇ ದಾರಿ ಬೆಲೆ ೦ ೧೨ ೦

14 ಸಣ್ಣ ಕತೆಗಳು ಇತರ ಪ್ರಕಟನೆಗಳು ಸದ್ಯದಲ್ಲೆ ಹೊರಡುತ್ತವೆ.



ಹೆಮೊನ್ (ರಿಜಿಸ್ಟರ್ಡ್)

ಕ್ಷಯರೋಗಕ್ಕೆ ರಾಮಬಾಣ

ಒಂದು ಉತ್ತಮ ಟಾನಿಕ್

ಸುವರ್ಣ, ಅಭ್ರಕ, ಲೋಹ, ಕ್ಯಾಲ್ಸಿಯಮ್, ಈ ಧಾತುಗಳಿಂದ ತಯಾರಾದ ಈ ಔಷಧ ಸೇವನೆಯಿಂದ ಕ್ಷಯದ ಪ್ರಥಮಾವಸ್ಥೆಯಲ್ಲಿಯ ಅನೇಕ ರೋಗಿಗಳು ಗುಣಹೊಂದಿದ್ದಾರೆ. ಅಶಕ್ತತೆ ಒರಟು ಬರುವುದು ದಂತಕ್ರಿಮಿಗಳಲ್ಲಿಯೂ ಇದನ್ನು ಉಪಯೋಗಿಸಬಹುದು.

ಕಾಸ್ಫೊ (ಅದ್ಭುತ ಕೆಮ್ಮುಹಾರಿ ಮಾತ್ರೆಗಳು)

ಯಾವುದೇತರದ ಕೆಮ್ಮಿಗೆ ಕ್ಷಣಮಾತ್ರದಲ್ಲಿಯೇ ಗುಣಕೊಟ್ಟು ಕೆಮ್ಮಿನ ಮೂಲವನ್ನೇ ನಾಶಮಾಡುವ ಉತ್ತಮ ಔಷಧವೆಂದು ಅನೇಕ ಜನ ಡಾಕ್ಟರರೂ ವೈದ್ಯರೂ ಪ್ರಶಂಸಿದ್ದಾರೆ. 'ಕಾಸ್ಫೊ'ದಲ್ಲಿ ರುಚಿಯೂ ಸುವಾಸನೆಯೂ ಇವೆ.

ಬೆಲೆ 35 ಮಾತ್ರೆಗಳು .... 1—4—0 ಮಾತ್ರ.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

ದಿ ಡೆಕ್ಕನ್ ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್

ಹೈದ್ರಾಬಾದ್ (ದಕ್ಷಿಣ).

ಬ್ರಾಂಚು : ಗಜಾನನ ಬಿಲ್ಡಿಂಗ್, ಸುಲ್ತಾನಪೇಟೆ, ಬೆಂಗಳೂರು ಸಿಟಿ.

WPS—D. H. K., 2